27+20+18+40 = 105 + 2 = 107

2022

# KMSS

2022

Question Booklet Sl. No. 1266126

71
78 } CDP
84

141 } SS
142

## QUESTION BOOKLET – PAPER – II

### (KANNADA MEDIUM SOCIAL SCIENCE ONLY)

**SUBJECTS : Language – I, Language – II, Child Development and Pedagogy, Social Science**

**Maximum Marks : 150** | **02.00 P.M. to 04.30 P.M.** | **Max. Time : 2.30 Hours**

## INSTRUCTIONS TO THE CANDIDATES (Read Carefully)

**Note: Candidates are instructed to confirm**

- **Whether pre-printed O.M.R. has your name and register number printed on it.**
- **Whether pre-printed O.M.R. Sheet No. and QP Booklet No. are same.**
- **If the candidate uses the O.M.R./QP booklet which doesn't belong to him/her, such O.M.R. sheets are not considered for evaluation.**

1. The sealed Question Booklet contains 150 questions and O.M.R. Answer Sheets. Verify whether the given Question Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in any case of any discrepancies/ doubt the question in English Medium is considered as valid.**
3. The Question Paper contains four parts I, II, III and IV consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 40 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 41 to 78 |
| Part – III | CDP (Kannada) | 61 to 90 | 79 to 84 |
| Part – III | CDP (English) | 61 to 90 | 85 to 90 |
| Part – IV | Social Science (Kannada) | 91 to 150 | 91 to 101 |
| Part – IV | Social Science (English) | 91 to 150 | 102 to 112 |

4. **Part – I contains 30 Questions for the Language – I and Part – II contains 30 Questions for the Language – II. In this Question Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part – II (Language – II) in any Language other than the Language chosen in the Part – I (Language – I).
6. **Questions related to Part – III : Child Development and Pedagogy (Q. No. 61 to 90), Part – IV : Social Science (Q. No. 91 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer booklet is not considered for evaluation.**
8. Each candidate is given carbonless O.M.R. sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

SEAL



Visit CollegeDekho

## PART – I

### ಭಾಷೆ – I

### ಕನ್ನಡ

**ಸೂಚನೆ : (ಪ್ರಶ್ನೆ ಸಂಖ್ಯೆ 1 ರಿಂದ 8) : ಈ ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :**

ಕರಾವಳಿಯ ಮರಳು ದಿಬ್ಬಗಳು ತುಂಬ ಚಂಚಲವಾಗಿರುತ್ತವೆ. ಸದಾ ಸಮುದ್ರದಿಂದ ದೂರ ಓಡಲು ಯತ್ನಿಸುವ ಈ ದಿಬ್ಬಗಳು ಋತುಮಾನಕ್ಕೆ ತಕ್ಕಂತೆ ನಿರಂತರ ರೂಪಾಂತರವಾಗುತ್ತಲೇ ಇರುತ್ತವೆ. ಪ್ರಾಯಶಃ ಯಾವ ಬಗೆಯ ಅಡೆ-ತಡೆಯೂ ಇಲ್ಲದಿದ್ದರೆ ಕ್ರಮೇಣ ಇವು ಒಳನಾಡಿನ ಕಡೆ ನುಸುಳಿ ಬರಲು ಯತ್ನಿಸುತ್ತವೆ. ಹಾಗಾಗದಂತೆ ಈ ದಿಬ್ಬಗಳ ಮೇಲೆ ಬೆಳೆಯುವ ಸಸ್ಯಗಳು, ತಮ್ಮ ಅನನ್ಯ ಬೇರು-ಕೊಂಬೆಗಳಿಂದ ದಿಬ್ಬವನ್ನು ತಬ್ಬಿ ಹಿಡಿದಿರುತ್ತವೆ. ಗಾಳಿಯ ಹೊಡೆತ ಹೆಚ್ಚಾಗಿರುವ ಸಮುದ್ರದಂಚಿನ ದಿಬ್ಬಗಳ ಮೇಲೆ ಜೊಂಡುಹುಲ್ಲು, ಮುಳ್ಳು ಬಳ್ಳಿ, ಪಾಪಾಸು ಕಳ್ಳಿ, ಮುರುಕಲ್ಲು ಸಸ್ಯ ಹೀಗೆ 90 ಕ್ಕೂ ಹೆಚ್ಚು ಪ್ರಭೇದದ ಸಸ್ಯಗಳು ಕರ್ನಾಟಕದ ಕಡಲ ತೀರದಲ್ಲಿವೆ. ಇವುಗಳಲ್ಲಿ ಒಂದೊಂದಕ್ಕೂ ಒಂದೊಂದು ಗುಣ. ಸದಾ ನೆಲದೊಳಕ್ಕೆ ಹುದುಗಿದ್ದು, ಸಮಯ ಬಂದಾಗ ಛಕ್ಕೆಂದು ಮೇಲೆದ್ದು ಹೂ ಬಿಟ್ಟು ಮುದುಡುವ ನೆಲದಾವರೆ; ಮನಮೋಹಕ ದಳ ಅರಳಿಸಿ ನಗು ಚೆಲ್ಲುವ ಅಕಾಂಪಿ; ಬಿಸಿಲನ್ನೇ ಕುಡಿದು ಬೆಳೆಯುವ ಆಡುಬಳ್ಳಿ; ಉಪ್ಪುಗಾಳಿಯನ್ನೇ ಉಸಿರಾಡುವ ಗರುಗದ ಗಿಡ; ಗಾಜಿನ ಮುಳ್ಳುಗಳುಳ್ಳ ಸಾಮೊಫೈಟ; ಹಾಸು ಬಂಡೆಗಳಿಗೆ ತೆಕ್ಕೆ ಹಾಕಿ ಮಲಗುವ ಕೂಟಗೇರು; ಅವುಗಳ ಪಾದದಲ್ಲಿ ಕರಕೆಲೆ, ದತ್ತೆಲೆ, ಮುಳ್ಳಂಕೋಲೆ . . .

ಮರಳು ದಿನ್ನೆಗೆ ದಿಗ್ಬಂಧನ ಹಾಕಿ ಮಾನವನಿಗೆ ರಕ್ಷಣೆ ಒದಗಿಸುವ ಇವಕ್ಕೂ ಮನುಷ್ಯನ ಕಾಟ ತಪ್ಪಿಲ್ಲ. ಎಲ್ಲೆಂದರಲ್ಲಿ ದಿಬ್ಬವನ್ನು ಅಗೆದು ಮರಳು ಸಾಗಿಸುವ ಗುತ್ತಿಗೆದಾರರು ಈ ಸಸ್ಯಗಳನ್ನೆಲ್ಲ ಕಚಕ್ಕೆಂದು ಸದೆಬಡಿದು ಹಾಕುತ್ತಾರೆ. ನೆಲ ಕೆದಕಿ, ಉಸುಕು ಎತ್ತಿದ ಮೇಲೆ ಹೊಂಡ – ತಗ್ಗುಗಳನ್ನು ಹಾಗೆಯೇ ಬಿಟ್ಟು ಸಾಗುತ್ತಾರೆ. ಈ ದಿಬ್ಬಗಳ ಮೇಲೆ ಈಗೀಗ ವ್ಯಾಪಕವಾಗಿ ಸರ್ವೇ ಗಿಡಗಳನ್ನು ನೆಡಲಾಗುತ್ತಿದೆ ನಿಜ. ಆದರೆ, ಅವುಗಳಿಂದ ಗಾಳಿಯ ಹೊಡೆತ ಕಡಿಮೆ ಆಗಬಹುದಾದರೂ, ನೆಲಮಟ್ಟದಲ್ಲಿ ಮರಳನ್ನು ಬಿಗಿ ಹಿಡಿದಿಡಲೆಂದೇ ನೈಸರ್ಗಿಕವಾಗಿ ಬೆಳೆಯುವ ಸಸ್ಯಗಳಷ್ಟು ಪ್ರಭಾವ ಪೂರ್ಣ ಪಾತ್ರ ನಿರ್ವಹಿಸಲು ಕ್ಯಾಶುರಿನಾ ಗಿಡಗಳಿಗೆ ಸಾಧ್ಯವಾಗುತ್ತಿಲ್ಲ.

**1.** ಮರಳು ದಿಬ್ಬಗಳ ಮೇಲೆ ಬೆಳೆಯುವ ಸಸ್ಯಗಳು ತಮ್ಮ ಅನನ್ಯ ಬೇರು-ಕೊಂಬೆಗಳಿಂದ ಇದನ್ನು ತಬ್ಬಿ ಹಿಡಿದಿರುತ್ತವೆ

(1) ದಿಬ್ಬವನ್ನು
(2) ಸಮುದ್ರವನ್ನು
(3) ನೆಲವನ್ನು
(4) ಮಣ್ಣನ್ನು

**2.** ಸದಾ ನೆಲದೊಳಗೆ ಹುದುಗಿದ್ದು, ಸಮಯ ಬಂದಾಗ ಛಕ್ಕೆಂದು ಮೇಲೆದ್ದು ಹೂ ಬಿಟ್ಟು ಮುದುಡುವುದು

(1) ಅಕಾಂಪಿ
(2) ಆಡುಬಳ್ಳಿ
(3) ನೆಲದಾವರೆ
(4) ಗರುಗದ ಗಿಡ



Visit CollegeDekho

3. ಹಾಸು ಬಂಡೆಗಳಿಗೆ ತೆಕ್ಕೆ ಹಾಕಿ ಮಲಗುವುದು

(1) ಕೂಟಗೇರು
(2) ಕರಕೆಲೆ
(3) ದತ್ತೆಲೆ
(4) ಮುಳ್ಳಂಕೋಲೆ

4. ಮರಳು ದಿನ್ನೆಗೆ ದಿಗ್ಬಂಧನ ಹಾಕಿ ಮಾನವನಿಗೆ ರಕ್ಷಣೆ ಒದಗಿಸುವ ಸಸ್ಯಗಳಿಗೆ

(1) ಪ್ರಾಣಿ ಕಾಟ ತಪ್ಪಿಲ್ಲ
(2) ಮನುಷ್ಯ ಕಾಟ ತಪ್ಪಿಲ್ಲ
(3) ಪ್ರಕೃತಿ ಕಾಟ ತಪ್ಪಿಲ್ಲ
(4) ಪ್ರವಾಹದ ಕಾಟ ತಪ್ಪಿಲ್ಲ

5. ಮರಳು ದಿಬ್ಬಗಳ ಮೇಲೆ ಈಗೀಗ ವ್ಯಾಪಕವಾಗಿ ಈ ಗಿಡಗಳನ್ನು ನೆಡಲಾಗುತ್ತಿದೆ

(1) ದತ್ತೆಲೆ
(2) ಮುಳ್ಳಂಕೋಲೆ
(3) ಕರಕೆಲೆ
(4) ಸರ್ವೆ

6. ಎಲ್ಲೆಂದರಲ್ಲಿ ದಿಬ್ಬವನ್ನು ಅಗೆದು ಮರಳು ಸಾಗಿಸುವವರು

(1) ಅರಣ್ಯ ರಕ್ಷಕರು
(2) ಗುತ್ತಿಗೆದಾರರು
(3) ದರೋಡೆಕಾರರು
(4) ಕಾಡುಗಳ್ಳರು

7. ನೆಲ ಕೆದಕಿ, ಉಸುಕು ಎತ್ತಿದ ಮೇಲೆ ಇವುಗಳನ್ನು ಹಾಗೆಯೇ ಬಿಟ್ಟು ಹೋಗುತ್ತಾರೆ

(1) ಗಿಡಗಳನ್ನು
(2) ದೋಣಿಗಳನ್ನು
(3) ಮೀನುಗಳನ್ನು
(4) ಹೊಂಡ-ತಗ್ಗುಗಳನ್ನು

8. ನೈಸರ್ಗಿಕವಾಗಿ ಬೆಳೆಯುವ ಸಸ್ಯಗಳಷ್ಟು ಪ್ರಭಾವ ಪೂರ್ಣ ಪಾತ್ರ ನಿರ್ವಹಿಸಲು ಈ ಗಿಡಗಳಿಗೆ ಸಾಧ್ಯವಾಗುವುದಿಲ್ಲ

(1) ದತ್ತೆಲೆ
(2) ಕರಕೆಲೆ
(3) ಕ್ಯಾಶುರಿನಾ
(4) ಸಾಮೊಪ್ಪೆಟ



Visit CollegeDekho

ಸೂಚನೆ : (ಪ್ರಶ್ನೆ ಸಂಖ್ಯೆ 9 ರಿಂದ 15) : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ :

ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ-
ದೆಂತು ಮೂಡಿತೊ ಬೆಳ್ಳಗೆ !

ಮೇಲೆ ನಭದಲಿ ನೂರು ತಾರೆಗ-
ಳರಳಿ ಮಿರುಗುವ ಮುನ್ನವೆ
ಬೆಳ್ಳಿಯೊಂದೇ ಬೆಳಗುವಂದದಿ
ಗಿಡದೊಳೊಂದೇ ಹೂವಿದೆ.

ಸತ್ವಶೀಲನ ಧ್ಯಾನಮೌನವೆ
ಅರಳಿ ಬಂದೊಲು ತೋರಿದೆ !
ಒಲವು ತುಂಬಿದ ಮುಗುದೆಯೆದೆಯಿಂ-
ದೊಗೆದ ನಲ್ನುಡಿಯಂತಿದೆ.

ಕವಿಯ ಮನದಿಂದುದಿಸಿ ಮೆಲ್ಲನೆ
ಅರಳಿ ಬರುವೊಲು ಕಲ್ಪನೆ,
ಎಂಥ ನವುರಿನ ಕುಶಲ ಕಲೆಯಿದು
ತನಗೆ ತಾನೇ ಮೂಡಿದೆ.

ಮೌನದಲಿ ಮೊಳೆಯುತ್ತ ಮೆಲ್ಲನೆ
ತನಗೆ ತಾನೇ ತಿಳಿಯದೆ
ಮೊಗ್ಗಿನಲಿ ಮಲಗಿದ್ದ ಚೆಲುವಿದು
ಇಂದು ಕಣ್ಣನು ತೆರೆದಿದೆ.

ಎನಿತು ನವುರಾಗಿಹವು ದಳಗಳು
ಹಸುಳೆ ಕಾಣುವ ಕನಸೊಲು !
ಏನು ಇಂಪಿನ ಕಂಪು ಇದರದು
ಆ ಮಹಾತ್ಮರ ಮನದೊಲು

ಹರಿವ ಮನವನು ಹಿಡಿದು ಒಂದೆಡೆ
ನಿಲಿಸಿ ತೊಳೆದಿದೆ ಹೂವಿದು.
ಚೆಲುವು ಬಾಳನು ಹಸನುಗೊಳಿಸುವ
ಅಚ್ಚರಿಯ ಪರಿ ಎಂಥದು !



Visit CollegeDekho

9. ಕವಿಯ ಮನದಿಂದುದಿಸಿ ಮೆಲ್ಲನೆ ಅರಳಿ ಬರುವುದು

(1) ಕುಶಲಕಲೆ
(2) ಕಲ್ಪನೆ
(3) ನಲ್ನುಡಿ
(4) ಹೂವು

10. ಮೊಗ್ಗಿನಲಿ ಮಲಗಿದ್ದ ಚೆಲುವು ಇಂದು ಇದನ್ನು ತೆರೆದಿದೆ

(1) ಕಣ್ಣನ್ನು
(2) ಮನವನ್ನು
(3) ಹೃದಯವನ್ನು
(4) ದಳವನ್ನು

11. ಹಸುಳೆ ಕಾಣುವ ಕನಸಿನಂತೆ ನವುರಾಗಿರುವವು

(1) ಹೂವುಗಳು
(2) ಮೊಗ್ಗುಗಳು
(3) ದಳಗಳು
(4) ಮನಸ್ಸುಗಳು

12. ಹರಿವ ಮನವನು ಹಿಡಿದು ಒಂದೆಡೆ ನಿಲಿಸಿ ತೊಳೆದಿರುವುದು

(1) ಹೂವಿದು
(2) ಮಹಾತ್ಮರ ಮನಸ್ಸು
(3) ಕುಶಲಕಲೆ
(4) ನಲ್ನುಡಿ

13. ಮಲ್ಲಿಗೆಯ ಅಚ್ಚರಿಯ ಪರಿ, ಚೆಲುವು ಬಾಳನು

(1) ಅಂದಗೊಳಿಸುವುದು
(2) ಕೆಡಿಸುವುದು
(3) ಒಡೆಯುವುದು
(4) ಹಸನುಗೊಳಿಸುವುದು

14. ನೋಡು ಇದೊ ಇಲ್ಲರಳಿ ನಗುತಿದೆ

(1) ಏಳು ಸುತ್ತಿನ ಮಲ್ಲಿಗೆ
(2) ನಲ್ನುಡಿ
(3) ಮಹಾತ್ಮರ ಮನಸ್ಸು
(4) ಹೂವು

15. ಸತ್ವಶೀಲನ ಈ ಮೌನವೆ ಅರಳಿ ಬಂದಂತೆ ಮಲ್ಲಿಗೆ ತೋರಿರುವುದು

(1) ಭಕ್ತಿ
(2) ಶಾಂತಿ
(3) ಧ್ಯಾನ
(4) ಶೀತಲ

16. ಆಲಿಸುವ ಕೌಶಲದಲ್ಲಿ ಬರಬಹುದಾದ ವ್ಯಕ್ತಿನಿಷ್ಠ ದೋಷ

(1) ವಿಷಯ ಅಥವಾ ವ್ಯಕ್ತಿಯ ಬಗ್ಗೆ ಪೂರ್ವಗ್ರಹ ಹೊಂದಿ ಕೇಳುವುದು
(2) ಅತಿವೇಗದ ಮಾತುಗಾರಿಕೆ
(3) ಹಿಂಜರಿಕೆ ತೋರುತ್ತಾ ಮಾತನಾಡುವುದು
(4) ಬಿಟ್ಟು ಬಿಟ್ಟು ವಿಷಯ ಆಲಿಸುವುದು



Visit CollegeDekho

17. ಉತ್ತಮ ಮಾತುಗಾರಿಕೆ ಕೌಶಲವು ಇದಕ್ಕೆ ಪೋಷಕ

(1) ವಿಮರ್ಶಾತ್ಮಕ ವಾಚನ
(2) ಸೂಕ್ಷ್ಮ ವಾಚನ
(3) ಮೌನ ವಾಚನ
(4) ಗಟ್ಟಿ ವಾಚನ

18. ಕೇಳಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವ ಉತ್ತಮ ಚಟುವಟಿಕೆ

(1) ಉಕ್ತಲೇಖನ
(2) ಪದ್ಯಗಾಯನ
(3) ಗದ್ಯವಾಚನ
(4) ನಾಟಕಾಭಿನಯ

19. ಗತಕಾಲದ ವಿಷಯಗಳನ್ನು ಹೇಳುವಾಗ ಈ ಪದ್ಧತಿಯನ್ನು ಹೆಚ್ಚಾಗಿ ಬಳಸಲಾಗುತ್ತದೆ

(1) ಪ್ರಶ್ನೋತ್ತರ ಪದ್ಧತಿ
(2) ಉಪನ್ಯಾಸ ಪದ್ಧತಿ
(3) ನಾಟಕಾಭಿನಯ ಪದ್ಧತಿ
(4) ಕಥನ ಪದ್ಧತಿ

20. ಉದಾಹರಣೆಗಳ ಮೂಲಕ ಸೂತ್ರದ ಕಡೆಗೆ ಸಾಗುವ ವ್ಯಾಕರಣ ಬೋಧನಾ ಪದ್ಧತಿ ಇದು

(1) ನಿಗಮನ
(2) ಅನುಗಮನ
(3) ಪ್ರಶ್ನೋತ್ತರ
(4) ಉಪನ್ಯಾಸ

21. ಪಾಠ ಯೋಜನೆಯಿಂದ ಶಿಕ್ಷಕರಿಗಾಗುವ ಅನುಕೂಲವಿದು

(1) ಬೋಧನೆಯಲ್ಲಿ ಗೊಂದಲ ಮೂಡಿಸುತ್ತದೆ
(2) ಬೋಧನೆಯಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ
(3) ಬೋಧನೆಯಲ್ಲಿ ನಿರಾಸೆ ಮೂಡಿಸುತ್ತದೆ
(4) ಮಕ್ಕಳಿಗೆ ಕಲಿಕಾ ಪ್ರಗತಿ ಮಾಡುತ್ತದೆ

22. ಭಾಷಾ ಪ್ರಯೋಗಾಲಯದಿಂದ ವಿದ್ಯಾರ್ಥಿಯು ಈ ಪ್ರಯೋಜನ ಪಡೆಯುವನು

(1) ತನ್ನಲ್ಲಿರುವ ಭಾಷಾ ಕಲಿಕಾ ತೊಂದರೆ ನಿವಾರಿಸಿಕೊಳ್ಳಲು ಪ್ರಯತ್ನಿಸುವನು
(2) ವಿದ್ಯಾರ್ಥಿಯೊಬ್ಬನೇ ಸದಾ ಕಲಿಯುವನು
(3) ಶಿಕ್ಷಕರ ಅವಶ್ಯಕತೆಯೇ ಇರದೆ ಕಲಿಯುವನು
(4) ವಿದ್ಯಾರ್ಥಿಯು ಚಟುವಟಿಕೆ ಮಾಡದೆ ಕಲಿಯುವನು

23. ಕ್ರಿಯಾ ಸಂಶೋಧನೆಯ ಮೊದಲ ಹಂತ ಇದು

(1) ಉದ್ದೇಶಗಳ ನಿರೂಪಣೆ
(2) ಕ್ರಿಯಾ ಆಧಾರ ಕಲ್ಪನೆ ರಚನೆ
(3) ಸಮಸ್ಯೆಯ ಕ್ಷೇತ್ರವನ್ನು ಗುರ್ತಿಸುವುದು
(4) ಸಮಸ್ಯೆಯ ಸಂಭವನೀಯ ಕಾರಣಗಳ ವಿಶ್ಲೇಷಣೆ



Visit CollegeDekho

24. ಕೈ ಬರಹದಲ್ಲಿ ಕಂಡುಬರುವ ದೋಷ

(1) ಸಂಭಾಷಣೆಯ ದೋಷ

(2) ಉಚ್ಚಾರದ ದೋಷ

(3) ಕಾಗುಣಿತ ದೋಷ

(4) ಉಗ್ಗುವಿಕೆ

25. ಪಠ್ಯಪುಸ್ತಕದ ರಚನಾ ತತ್ವ ಇದು

(1) ಶಿಶು ಕೇಂದ್ರಿತ
(2) ಶಿಕ್ಷಕ ಕೇಂದ್ರಿತ
(3) ಪೋಷಕ ಕೇಂದ್ರಿತ
(4) ಸಂಸ್ಥೆ ಕೇಂದ್ರಿತ

26. ನಿತ್ಯ ನಪುಂಸಕಲಿಂಗಕ್ಕೆ ಉದಾಹರಣೆ ಇದು

(1) ಕಲ್ಲು
(2) ದಂಡು
(3) ನದಿ
(4) ರಾಮ

27. ವಿಶೇಷಣ – ವಿಶೇಷ್ಯ ಸಂಬಂಧದಿಂದ ಕೂಡಿ ಆದ ಸಮಾಸ

(1) ಕ್ರಿಯಾ
(2) ತತ್ಪುರುಷ
(3) ದ್ವಂದ್ವ
(4) ಕರ್ಮಧಾರಯ

28. ಸಂಪ್ರದಾನಕಾರಕಾರ್ಥದಲ್ಲಿ ಬಳಕೆಯಾಗುವ ವಿಭಕ್ತಿ

(1) ಪ್ರಥಮ
(2) ತೃತೀಯ
(3) ಚತುರ್ಥಿ
(4) ಸಪ್ತಮಿ

29. ಅಕರ್ಮಕ ಧಾತುವಿಗೆ ಉದಾಹರಣೆ ಇದು

(1) ಓಡು
(2) ತಿನ್ನು
(3) ಬರೆ
(4) ಓದು

30. 'ಚೆನ್ನಾಗಿ' ಎಂಬ ಪದವು ಅವ್ಯಯದ ಈ ವಿಧ

(1) ಭಾವಸೂಚಕ
(2) ಅನುಕರಣ
(3) ಕ್ರಿಯಾರ್ಥಕ
(4) ಸಾಮಾನ್ಯ



Visit CollegeDekho

## PART – I
## Language – I
## ENGLISH

**Read the passage and answer the questions that follow (Q. No. 1 – 8)**

Though rare we have heard of bigger animals showering their motherly love on smaller beings not of their kind, like a cow feeding a dog or a bitch feeding kittens, recently in an African National Park, there was this news of a lioness adopting a wolf cub.

But then nature always has a good stock of surprises for us.

There is a bitch named Sony in my home in the village of Vittalin in South Canara district of Karnataka. Some four summers ago, I had a wonder awaiting me back home. Once I noticed Sony, feeding the month old calf, Kanabhatta with her own milk. We relished this touching scene every morning for half an hour. The calf was tied in the country yard close to the two feet high platform which ran along the outer wall of the house. Though it was more than double Sony's size, she would stand on the platform to make it convenient for the calf to reach its teats and suckle. She continued to feed the calf till it was sold off, when it was a year old. I was told that the calf would accidentally step on her or charge at her and she would yell in pain when she came to feed him. But yet she would never give up her efforts to feed him.

There were tears in her eyes on the day the calf was taken away and she mourned the parting for more than a month. The compassionate Sony continues to be in our home till date.

**1.** But then nature always has a good stock of surprises for us. Here the stock of surprise refers to

(1) mothers taking care of their younger ones
(2) mothers feeding their younger ones
(3) the bigger animals showering their motherly love on smaller beings not of their kind
(4) smaller beings taking care of the bigger animals

**2.** ... a wonder awaiting me back home. The wonder that was awaiting was

(1) Cow feeding the calf
(2) Sony feeding the calf
(3) Sony feeding its puppies
(4) Cow feeding the puppies

**3.** Sony : bitch : : Kanabhatta : ___________
The correct word to be filled in the blank is

(1) Pony (2) Kitten (3) Puppy (4) Calf



Visit CollegeDekho

4. She mourned the parting for more than a month. It shows that
(1) the bitch loved the calf very much
(2) the bitch was relieved at the end
(3) the bitch was mourning for its puppies
(4) the bitch was sad for its own condition

5. Sony continued to feed the calf. The correct question tag to be added here is
(1) Wasn't it ?
(2) Didn't it ?
(3) Weren't it ?
(4) Hadn't it ?

6. She would never give up her efforts. The meaning of the underlined words is
(1) Stop (2) Start (3) Begin (4) Commence

7. The plural form of calf is
(1) Calfs (2) Calf (3) Calves (4) Cows

8. "She would stand on the platform to make it convenient for the calf to reach its teats and suckle". Here 'She' refers to
(1) the bitch (2) the lioness (3) the cat (4) the cow

**Read the given poem and answer the questions that follow (Q. No. 9 – 15).**

**The Rose**

How fair is the rose, what a beautiful flower.
The glory of April and May !
But the leaves are beginning to fade in an hour,
And they wither and die in a day.
Yet the rose has one powerful virtue to boast,
Above all flowers of the field :
When its leaves are all dead, and its colours are lost,
Still a perfume so sweet it will yield.
So frail are the youth and the beauty of men,
Though they bloom and look gay like the rose,
Yet for all fond care to preserve them in vain.
Time kills them as fast as he goes.
Then I'll not be proud of my youth or my beauty,
Since both of them wither and fade,
But gain a fair name by well-doing my duty;
This will last like the rose when I'm dead.



Visit CollegeDekho

9. Special virtue of the rose is
(1) it smells sweet even after decaying
(2) it blooms only in April and May
(3) it withers and dies in a day
(4) it loses its colour and leaves

10. Time kills
(1) sweet perfume (2) beauty and youth
(3) powerful virtue (4) fair name

11. A man can make himself remembered forever by
(1) comparing himself with a rose
(2) using sweet-scented rose perfume
(3) being proud of his youth and beauty
(4) being dutiful and earning a good name

12. Issac Walts desires that
(1) men must wither away in a day
(2) men must preserve their beauty forever
(3) a man's life must be like that of a rose
(4) a man must die while doing his duty

13. The poet compares the transient nature of beauty and youthhood to
(1) sweet perfume of rose flower (2) colourful leaves of rose plant
(3) short life of a few flowers (4) the months of April and May

14. Flower : hour : : field :
(1) yield (2) fade (3) said (4) dead

15. The antonym of the word 'virtue' is
(1) merit (2) value (3) grace (4) vice

16. If you had called, I ______ come. The correct word/words to be filled in the blank is
(1) would (2) will (3) would have (4) will have

17. The peon opened the gate. This sentence can be written in passive voice as
(1) The gate will be opened by the peon
(2) The gate is opened by the peon
(3) The gate was opened by the peon
(4) The gate has been opened by the peon



Visit CollegeDekho

18. The sentence which shows that you are seeking information is

(1) Can you pass the dish ?
(2) Would you like to have coffee ?
(3) When is the next bus expected ?
(4) Why don't we do our homework ?

19. The sentence where the subject and the verb agrees is

(1) Either a pen or a pencil are required in the exam hall.
(2) Either a pen or a pencil were required in the exam hall.
(3) Either a pen or a pencil required in the exam hall.
(4) Either a pen or a pencil is required in the exam hall.

20. The Major said, "It gives me great pleasure to be here".

This sentence can be reported as

(1) The Major said that it gave him great pleasure to be there.
(2) The Major said that it had given him great pleasure to be here.
(3) The Major said that it gave me great pleasure to be there.
(4) The Major said that it was giving him great pleasure to be there.

21. Charts, flash cards and calendars are

(1) Audio aids
(2) Visual aids
(3) Audio-visual aids
(4) None of the above

22. The nature of student-teacher interaction in a communicative activity should ideally be

(1) teacher dominated
(2) student dominated
(3) activity dominated
(4) textbook dominated

23. CCE provides feedback to

(1) the child
(2) the parents
(3) teachers
(4) all of the above

24. The Bilingual method makes use of two languages which are

(1) the mother tongue and the target language
(2) the mother tongue and a foreign language
(3) an unknown language and a foreign language
(4) the target language and a foreign language



Visit CollegeDekho

25. Communicative language teaching approach stresses the importance of

(1) provide learners with opportunities to use their English for communicative purposes
(2) stimulating the development of the language system itself
(3) developing the reading and writing skills of language
(4) engaging repetition and drilling activities

26. In the communicative approach to language learning

(1) The teacher acts as facilitator
(2) The teacher takes the lead to communicate
(3) The teacher expects the children to design, set-up, engage and complete communicative activities
(4) The teacher is critical when children err

27. In language teaching the full form of CLT is

(1) Communicative Language Teacher
(2) Communicative Language Trainer
(3) Children Language Teaching
(4) Communicative Language Teaching

28. Which of the following sets are only audio aids ?

(1) radio, gramophone, tape recorder, lingua phone
(2) radio, TV, tape recorder, lingua phone
(3) radio, gramophone, slides, tape recorder
(4) radio, cassettes, flash cards, flannel boards

29. The most important component of language to develop speaking skill from the given option is

(1) Vocabulary
(2) Punctuations
(3) Structures
(4) Verb forms

30. Students are busy working in groups. There is much talking in the group. The principle associated to this activity is

(1) Facilitation of target language by student's interaction
(2) Each student is accountable for the other's learning
(3) The teacher's effort in teaching the language is seen
(4) Making classroom active and noisy



Visit CollegeDekho

## PART – II

### ಭಾಷೆ – II

### ಕನ್ನಡ

**ಸೂಚನೆ : ಈ ಕೆಳಗಿನ ಗದ್ಯ ಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ. ಸಂ. 31 ರಿಂದ 38) ಉತ್ತರಿಸಿ.**

ಪ್ರಪಂಚದ ಅತ್ಯಂತ ಅಪಾಯಕಾರಿ ಜಲಚರಗಳು ಎಂದರೆ ಕೂಡಲೇ ನಮಗೆ ಸಾಧಾರಣವಾಗಿ ನೆನಪಾಗುವುದು ಸಮುದ್ರದ ಶಾರ್ಕುಗಳು. ದೋಣಿಗಳು ತಲೆಕೆಳಗಾದಾಗಲೋ, ಹಡಗುಗಳು ಒಡೆದು ಪಯಣಿಗರು ರಬ್ಬರ್ ದೋಣಿಗಳಲ್ಲಿ ಪ್ರಾಣ ರಕ್ಷಣೆಗೆ ಯತ್ನಿಸುವಾಗ, ಸಮುದ್ರದ ಮಧ್ಯೆ ಅಪಘಾತ ಸಂಭವಿಸಿ ವಿಮಾನದಿಂದ ಪ್ಯಾರಚೂಟ್‌ಗಳಲ್ಲಿ ವೈಮಾನಿಕರು ಧುಮುಕಿದಾಗಲೂ ಅವರಿಗೆ ಇರುವ ಮೊದಲ ಅಪಾಯ ಎಂದರೆ ಸಮುದ್ರದ ಶಾರ್ಕುಗಳು. ಸಮುದ್ರದ ಭಯಜನಕ ಜೀವಿಗಳೆಂದು ಶಾರ್ಕುಗಳು ಹೆಸರಾಗಿವೆ. ಇವುಗಳನ್ನು ಬಿಟ್ಟರೆ ಅನಂತರದ ಸ್ಥಾನ ಕಿಲ್ಲರ್ ವೇಲ್‌ಗಳಿಗೆ ದೊರೆಯುತ್ತದೆ. ಆದರೆ ದಕ್ಷಿಣ ಅಮೇರಿಕಾದ ಅಮೆಜಾನ್ ನದಿಯ ಸಿಹಿನೀರಿನ ಮೀನುಗಳಲ್ಲಿ ಒಂದಾದ ಪಿರಾನ್ಯ ಎನ್ನುವ ಚಿಕ್ಕ ಮೀನು ಎಷ್ಟು ಭೀಕರವಾದುದೆಂದರೆ ತನ್ನ ನಾಮಮಾತ್ರದಿಂದಲೇ ಅಲ್ಲಿನ ಜನರಿಗೆ ಭಯಹಿಡಿಸುತ್ತದೆ.

ಈ ಮೀನು ನೋಡುವುದಕ್ಕೇನೂ ಅಷ್ಟೊಂದು ಭಯಂಕರವಾಗಿಲ್ಲ. ಅದನ್ನು ಅದರ ರೂಪಕ್ಕಾಗಿ ಅನೇಕರು ತಮ್ಮ ಅಕ್ವೇರಿಯಂನಲ್ಲಿ ಇಟ್ಟುಕೊಂಡು ಸಾಕುತ್ತಾರೆ. ಇದು ನೋಡುವುದಕ್ಕೆ ನಮ್ಮ ಏಂಜಲ್ ಮೀನಿನಂತೆಯೇ ಇದೆ. ಚಪ್ಪಟೆಯಾದ ಇದರ ಮೈ ನೀರನ್ನು ಸೀಳಿಕೊಂಡು ನುಗ್ಗಲು ಹದವಾಗಿದೆ. ಆದರೆ ಇದರ ಸೌಮ್ಯತೆ ಎಲ್ಲ ಇದರ ರೂಪ ಆಕಾರಗಳಲ್ಲೇ ಹೊರತು, ಇದರ ನಡವಳಿಕೆಯ ಕ್ರೂರತೆಯನ್ನು ನೋಡಿದವರು ಇದನ್ನೆಂದೂ ಮುಟ್ಟಲೂ ಹೋಗುವುದಿಲ್ಲ.

ಸುಮಾರು ಒಂದು ಅಡಿಯವರೆಗೆ ಬೆಳೆಯುವ ಈ ಮೀನಿನ ತಲೆಬುರುಡೆಯೇ ಇದರ ಮೈಯ ಅರ್ಧದಷ್ಟು ಇದ್ದು ಕಬ್ಬಿಣದಷ್ಟು ಗಟ್ಟಿಯಾಗಿದೆ. ಇದರ ಕಣ್ಣುಗಳು ರಕ್ತದಷ್ಟು ಕೆಂಪಗಿರುತ್ತವೆ. ಇದು ಬಾಯಿ ತೆರೆದರೆ ಮೇಲೂ ಕೆಳಗೂ ಎರಡೆರಡು ಸಾಲು ಹಲ್ಲುಗಳು ಹಜಾಮರ ಕ್ಷೌರದ ಕತ್ತಿಗಿಂತ ಹರಿತವಾಗಿರುತ್ತದೆ. ಇದರ ಫಲಿತಾಂಶ ಎಂದರೆ ಈ ಜೋಡಿ ಹಲ್ಲುಗಳ ದಂತ ಪಂಕ್ತಿಗಳ ನಡುವೆ ಏನಾದರೂ ಸಿಕ್ಕಿದರೆ ಒಂದೇ ಸಾರಿಗೆ ಕತ್ತರಿಸಿ ತುಂಡಾಗುತ್ತವೆ. ದಕ್ಷಿಣ ಅಮೇರಿಕಾದ ಕಾಡಿನ ಜನರ ಭಾಷೆಯಲ್ಲಿ ಪಿರಾನ್ಯ ಎಂದರೆ ನರಭಕ್ಷಕ ಎಂದೇ ಅರ್ಥ.

**31.** ಸಮುದ್ರದ ಭಯಜನಕ ಜೀವಿಗಳೆಂದು ಹೆಸರಾದದ್ದು

(1) ಏಂಜಲ್‌ಗಳು
(2) ಕಿಲ್ಲರ್ ವೇಲ್‌ಗಳು
(3) ಶಾರ್ಕುಗಳು
(4) ಡಾಲ್ಫಿನ್‌ಗಳು

**32.** ತನ್ನ ಹೆಸರಿನಿಂದಲೇ ದಕ್ಷಿಣ ಅಮೇರಿಕಾದ ಜನರಿಗೆ ಭಯಹಿಡಿಸಿದ ಮೀನು

(1) ಶಾರ್ಕು
(2) ಪಿರಾನ್ಯ
(3) ಏಂಜಲ್
(4) ಕಿಲ್ಲರ್ ವೇಲ್

**33.** ಪಿರಾನ್ಯ ಮೀನನ್ನು ಅನೇಕರು ಅಕ್ವೇರಿಯಂನಲ್ಲಿಟ್ಟು ಸಾಕಲು ಕಾರಣ

(1) ಅದರ ರೂಪ
(2) ಅದರ ನಡವಳಿಕೆ
(3) ಅದರ ಶಕ್ತಿ
(4) ಅದರ ದಂತಪಂಕ್ತಿ



Visit CollegeDekho

34. ಪಿರಾನ್ಯ ಮೀನಿನ ಸೌಮ್ಯತೆ ಇರುವುದು

(1) ನಡವಳಿಕೆಯಲ್ಲಿ (2) ತಲೆಬುರುಡೆಯಲ್ಲಿ

(3) ಕಣ್ಣಿನಲ್ಲಿ (4) ರೂಪ ಆಕಾರಗಳಲ್ಲಿ

35. ಪಿರಾನ್ಯ ಮೀನು ನೀರನ್ನು ಸೀಳಿಕೊಂಡು ಹೋಗಲು ಇದು ಸಹಕಾರಿ

(1) ಚಪ್ಪಟೆಯಾದ ಮೈ (2) ಹರಿತವಾದ ಹಲ್ಲು

(3) ಗಟ್ಟಿಯಾದ ತಲೆಬುರುಡೆ (4) ಕೆಂಪಾದ ಕಣ್ಣು

36. ಪಿರಾನ್ಯ ಮೀನಿನ ಈ ಗುಣ ತಿಳಿದವರು ಅದನ್ನು ಮುಟ್ಟಲು ಹೋಗುವುದಿಲ್ಲ

(1) ಸೌಮ್ಯತೆ (2) ಕಠಿಣತೆ (3) ಕ್ರೂರತೆ (4) ನಮ್ರತೆ

37. ಪಿರಾನ್ಯ ಮೀನು ರೂಪದಲ್ಲಿ ಈ ಮೀನನ್ನು ಹೋಲುತ್ತದೆ

(1) ಸಮುದ್ರದ ಶಾರ್ಕು (2) ಏಂಜಲ್

(3) ಕಿಲ್ಲರ್ ವೇಲ್ (4) ಡಾಲ್ಫಿನ್

38. ದಕ್ಷಿಣ ಅಮೇರಿಕಾದ ಕಾಡಿನ ಜನರ ಭಾಷೆಯಲ್ಲಿ ಪಿರಾನ್ಯ ಎಂದರೆ

(1) ದೇವತೆ (2) ಅದೃಷ್ಟಶಾಲಿ (3) ದೇವದೂತ (4) ನರಭಕ್ಷಕ

**ಸೂಚನೆ : ಕೆಳಗಿನ ಪದ್ಯವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ. ಸಂ. 39 ರಿಂದ 45) ಉತ್ತರಿಸಿ :**

ಬುಟ್ಟಿ ತುಂಬಿರುವ ಕವಳೆ ಹಣ್ಣುಗಳನ್ನು ಸುರುವಿದಂತೆ
ಕೆಳಗೆ ಇಳಿವ ಮಳೆ.
ನಕ್ಷೆಯಲಿ ಭಾರತದ ರಾಜ್ಯಗಳ ಬರೆದಂತೆ
ಚೆಲ್ಲುವರಿದಿಹ ಮೋಡ.

ಆಚೆ ಮನೆ ಚಿಕ್ಕ ಮಗು
ಅಕಾರಣವೆ ಸಂತತವು ನಕ್ಕಂತೆ
ಇಳಿಜಾರಿನಲಿ ಆಟವಾಡುವ ಬಿಸಿಲು,
ಅನ್ನದಲಿ ಮಜ್ಜಿಗೆಯ ಸಿಹಿ ಸಾರನುಂಡಂತೆ
ತೊಯ್ದ ನೆಲ.

ಇಲ್ಲಿ ಪೃಥಿವಿಯನೆ
ಚಿಕ್ಕೂ ಹಣ್ಣನೆರಡು ಹೋಳು ಮಾಡಿದ ಹಾಗೆ
ಒಂದು ಪರಡೆಯಲಿ ತೂಗುತಿಹ ಶಾಂತಿ
ಅತ್ತ ಕೋಲಾಹಲದ ತೂಗು-ಕಲ್ಲು.



Visit CollegeDekho

ಇಲ್ಲಿಯೇ ನಿಲ್ಲು,
ಈ ಅದ್ಭುತ ವಿಚಿತ್ರವನು ನೋಡಿ
ಎಲೊ ಖೋಡಿ
ನಿನ್ನ ವೇದನೆಯ ಮಳೆಹುಳವ ಕೊಲ್ಲು.

ಈ ರಜತರೇಖೆಯನು ದಾಟಬೇಡ,
ನೀ ತಾಳ್ಮೆಗೆಡದಲೇ
ಚಿಂತೆಗಳ ಚಪ್ಪಲ್ಲು ಮೆಟ್ಟಿ ಇಲ್ಲಿಯೇ ನಿಲ್ಲು.

**39.** ಬುಟ್ಟಿ ತುಂಬಿರುವ ಕವಳೆ ಹಣ್ಣುಗಳನ್ನು ಸುರುವಿದಂತೆ ಕೆಳಗೆ ಇಳಿಯುವುದು.

(1) ಬಿಸಿಲು (2) ಮಳೆ (3) ಮಂಜು (4) ನೀರು

**40.** ಬಿಸಿಲು ಇಲ್ಲಿ ಆಟವಾಡುತ್ತದೆ.

(1) ಪರ್ವತದ ಮೇಲೆ
(2) ಬಯಲಿನಲ್ಲಿ
(3) ಮೋಡಗಳ ನಡುವೆ
(4) ಇಳಿಜಾರಿನಲ್ಲಿ

**41.** ಅನ್ನದಲಿ ಮಜ್ಜಿಗೆಯ ಸಿಹಿ ಸಾರನುಂಡಂತೆ ಕಾಣುತ್ತಿರುವುದು ಇದು.

(1) ತೊಯ್ದ ನೆಲ
(2) ಅಕಾರಣ ನಗುವ ಮಗು
(3) ಚೆಲ್ಲುವರಿದಿಹ ಮೋಡ
(4) ನಕ್ಷೆಯಲಿ ಬರೆದ ಭಾರತದ ರಾಜ್ಯಗಳು

**42.** ಪೃಥ್ವಿಯ ಒಂದು ಪರಡೆಯಲಿ ಶಾಂತಿ ತೂಗುತ್ತಿದ್ದರೆ ಇನ್ನೊಂದು ಕಡೆ

(1) ದುಃಖ
(2) ಉತ್ಸಾಹ
(3) ಕೋಲಾಹಲ
(4) ಮೌನ

**43.** ಕವಿ ವೇದನೆಯನ್ನು ಇದಕ್ಕೆ ಹೋಲಿಸಿದ್ದಾರೆ

(1) ಮಳೆ ಹುಳಕ್ಕೆ
(2) ಜಂತುಹುಳಕ್ಕೆ
(3) ಗೊಬ್ಬರಹುಳಕ್ಕೆ
(4) ಎರೆಹುಳಕ್ಕೆ

**44.** ಕವಿ ಇದನ್ನು ದಾಟಬೇಡ ಎಂದು ಹೇಳಿದ್ದಾರೆ.

(1) ಸ್ವರ್ಣರೇಖೆಯನ್ನು
(2) ಲಕ್ಷ್ಮಣರೇಖೆಯನ್ನು
(3) ಗಡಿರೇಖೆಯನ್ನು
(4) ರಜತರೇಖೆಯನ್ನು

**45.** ಈ ಚಪ್ಪಲ್ಲು ಮೆಟ್ಟಿ ನಿಲ್ಲಬೇಕು.

(1) ತಾಳ್ಮೆಯ
(2) ಚಿಂತೆಗಳ
(3) ವೇದನೆಯ
(4) ಕೋಲಾಹಲದ



Visit CollegeDekho

46. ಕಾವ್ಯ ಬೋಧನೆಗೆ ಈ ಪದ್ಧತಿ ಪ್ರಶಸ್ತವಾಗಿದೆ.

(1) ಖಂಡ ಪದ್ಧತಿ
(2) ಅನುಗಮನ ವಿಧಾನ
(3) ನಿಗಮನ ವಿಧಾನ
(4) ಸಂಪೂರ್ಣ ಪದ್ಧತಿ

47. ಇದು ಉತ್ತಮ ಕೈ ಬರಹದ ಲಕ್ಷಣಕ್ಕೆ ವಿರುದ್ಧವಾಗಿದೆ.

(1) ದುಂಡಾಗಿ ಆಕರ್ಷಕವಾಗಿರಬೇಕು
(2) ಸುಸ್ಪಷ್ಟವಾಗಿರಬೇಕು
(3) ಅಕ್ಷರಗಳಲ್ಲಿ ಬಹುರೂಪತೆಯಿರಬೇಕು
(4) ನೇರವಾದ ಸಾಲುಗಳಲ್ಲಿ ಬರೆಯಬೇಕು

48. ಮಗು ಉತ್ತರಿಸಿದಾಗ ಕೆಕ್ಕರಿಸಿ ನೋಡುವುದು

(1) ಧನಾತ್ಮಕ ಶಾಬ್ದಿಕ ಅಭಿವರ್ಧನ
(2) ಧನಾತ್ಮಕ ಅಶಾಬ್ದಿಕ ಅಭಿವರ್ಧನ
(3) ಋಣಾತ್ಮಕ ಶಾಬ್ದಿಕ ಅಭಿವರ್ಧನ
(4) ಋಣಾತ್ಮಕ ಅಶಾಬ್ದಿಕ ಅಭಿವರ್ಧನ

49. ಇದು ಸ್ಥೂಲ ಬೋಧನೆಗೆ ಸಂಬಂಧಿಸಿರುವುದಿಲ್ಲ.

(1) ಜೀವಂತ ಪರಿಸರದಲ್ಲಿ ನಡೆಯುವ ಬೋಧನೆ
(2) ಏಕಕೌಶಲದ ಬೋಧನೆ
(3) ಬಹುಕೌಶಲಗಳ ಬೋಧನೆ
(4) ಬಹು ಪರಿಕಲ್ಪನೆಗಳ ಬೋಧನೆ

50. ಇದು ಜ್ಞಾನವಲಯದ ಉದ್ದಿಷ್ಟವಲ್ಲ

(1) ಅರ್ಥಗ್ರಹಣ
(2) ಅನ್ವಯ
(3) ಮೆಚ್ಚುಗೆ
(4) ವಿಶ್ಲೇಷಣೆ

51. ಭಾಷೆ ಅಥವಾ ಭಾಷಾ ಕೌಶಲಗಳನ್ನು ಕಲಿಯಲು ಮಾನಸಿಕ ಶಾರೀರಿಕ ಸಿದ್ಧತೆ ಇರಬೇಕು ಎನ್ನುವುದು

(1) ಸಿದ್ಧತೆಯ ನಿಯಮ
(2) ಅನುಕರಣೆಯ ನಿಯಮ
(3) ಅಭ್ಯಾಸ ನಿಯಮ
(4) ಅಭಿರುಚಿಯ ನಿಯಮ



Visit CollegeDekho

52. ಇದು ಕಲಿಕಾ ಸೂತ್ರಾಧಾರಿತವಾದುದಲ್ಲ
(1) ತಿಳಿದ ವಿಷಯದ ಕಡೆಯಿಂದ ತಿಳಿಯದ ವಿಷಯದೆಡೆಗೆ ಕಲಿಕೆ
(2) ಕ್ಲಿಷ್ಟತೆಯಿಂದ ಸರಳತೆಯೆಡೆಗೆ ಕಲಿಕೆ
(3) ಜೀವನಾನುಭವಗಳಿಗೆ ಹೊಂದಿಸಿ ಕಲಿಕೆ
(4) ದೃಷ್ಟಾಂತಗಳ ಮೂಲಕ ಸೂತ್ರ , ಸಮನ್ವಯದ ಕಲಿಕೆ

53. ಇದು ಮೌನ ಓದಿನ ಲಕ್ಷಣಕ್ಕೆ ಹೊರತಾದುದಾಗಿದೆ
(1) ಭಾವಯುಕ್ತವಾಗಿರುತ್ತದೆ
(2) ಅರ್ಥಗ್ರಹಣಕ್ಕೆ ಹೆಚ್ಚಿನ ಮಹತ್ವವಿರುತ್ತದೆ
(3) ಧ್ವನ್ಯಂಗಗಳಿಗೆ ಕೆಲಸ ಇರುವುದಿಲ್ಲ
(4) ಶ್ರೋತೃಗಳ ಪ್ರತಿಕ್ರಿಯೆ ಗಮನಿಸುತ್ತಾ ಓದುವುದು

54. "ಅನುಭವಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವುದರ ಮೂಲಕ ಅವು ಸ್ವಾಧೀನಗೊಳ್ಳುವ ಪ್ರಕ್ರಿಯೆಯೇ ಸಂವಹನ" ಎಂದವರು
(1) ಡಿ. ಬರ್ಲೋ
(2) ಜಾನ್ ಡ್ಯೂಯಿ
(3) ಲಾರೆನ್ಸ್
(4) ಅರಿಸ್ಟಾಟಲ್

55. ಇದು ಉತ್ತಮ ಪರೀಕ್ಷೆಯ ಗುಣಲಕ್ಷಣವಲ್ಲ
(1) ಸಮಂಜಸತೆ
(2) ವಿಶ್ವಸನೀಯತೆ
(3) ವಸ್ತುನಿಷ್ಠತೆ
(4) ಸಂಕುಚಿತತೆ

56. 'ಮೆಲ್ವಾತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ
(1) ಲೋಪ ಸಂಧಿ
(2) ಆಗಮ ಸಂಧಿ
(3) ಆದೇಶ ಸಂಧಿ
(4) ಗುಣ ಸಂಧಿ

57. 'ಹೊಸಗನ್ನಡ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
(1) ಕರ್ಮಧಾರೆಯ ಸಮಾಸ
(2) ದ್ವಿಗು ಸಮಾಸ
(3) ತತ್ಪುರುಷ ಸಮಾಸ
(4) ಅಂಶಿ ಸಮಾಸ

58. ಇದು ಚತುರ್ಥಿ ವಿಭಕ್ತಿಯ ಕಾರಕಾರ್ಥ
(1) ಕರಣಾರ್ಥ
(2) ಸಂಪ್ರದಾನ
(3) ಸಂಬಂಧ
(4) ಅಧಿಕರಣ

59. 'ಬಿನ್ನಹ' ಈ ಪದದ ತತ್ಸಮ ರೂಪ
(1) ಬಿನ್ನಾಣ
(2) ವಿಜ್ಞಾನ
(3) ವಿಜ್ಞಾಪನೆ
(4) ವಿಸ್ಮಯ

60. 'ತಲೆದೂಗು' ಈ ನುಡಿಗಟ್ಟಿನ ಅರ್ಥ
(1) ದೊಡ್ಡ ಹೊಣೆಗಾರಿಕೆ
(2) ನಷ್ಟವಾಗು
(3) ಚಿಂತಿಸು
(4) ಮೆಚ್ಚುಗೆ ಸೂಚಿಸು



Visit CollegeDekho

## PART – II
## Language – II
## ENGLISH

**Read the following passage and answer the questions that follow. (Q. No. 31 – 38)**

One hot day a man was travelling along a busy road. He was going to his village. He was tired and sweat was pouring down his face. He stopped a cart that came along and asked the cartman to give him a lift.

"I'll take you there for ten rupees," said the cartman. The traveller agreed and climbed onto the cart.

An hour later the cartman stopped for his mid-day meal. He went and sat under a tree. The traveller got down and sat under the shade of the cart.

The cartman finished eating and they started their journey again. When they reached the village, the traveller took out a ten rupee note to pay the cartman. But the cartman would not take it. "Didn't you rest in the shade of my cart in the heat of the mid-day sun ?" he asked, "Pay me for the shade too. Give me twenty rupees !"

The traveller refused there was a quarrel. They went to the village head person and asked him to settle the dispute. It was late afternoon. The headman asked the traveller to stand in the middle of the road holding a ten rupee note in the hand.

The traveller did as he was told. The headman then turned to the cartman.

"Go! take both the rupees," he said

"Both ?" asked the cartman, confused

"Yes," said the headman, "Both. The one in his hand and its shadow on the ground. I think the shadow of a rupee is a fair price for the shade of a cart".

**31.** Choose the word which means "Quarrel".

(1) Dispute
(2) Reveal
(3) Confuse
(4) Refuse



Visit CollegeDekho

32. 'The cartman stopped for his meal.' The part of speech of the underlined word in the sentence is
(1) Verb (2) Adjective (3) Adverb (4) Noun

33. The cartman demanded rupees twenty on reaching the village as
(1) the village took longer to reach than expected
(2) he felt that the traveller was rich
(3) he felt that the traveller had to pay for the ride and the shade the traveller had received from the cart
(4) he felt that the traveller should pay for his meal which he took during the ride

34. The headman told the traveller to stand in the middle of the road holding a ten rupee note in his hand and said
(1) Go! Take the note
(2) Go! Take both the notes
(3) Go! Take the note in his hands
(4) Go! Take the note in the shadow

35. The traveller wanted a lift because
(1) he wanted to got to his village in a cart
(2) he was tired
(3) he did not want to talk
(4) he wanted to reach the city soon

36. The cartman agreed to take the traveller because
(1) he pitied his plight
(2) he wanted to cheat the traveller
(3) the traveller agreed to pay ten rupees
(4) he did not want to refuse the traveller

37. The traveller refused to pay rupees twenty as fare because
(1) he had agreed to pay only ten rupees
(2) he did not have twenty rupees
(3) he did not have the change
(4) he wanted to cheat the cart driver

38. The opposite for the word 'refuse' is
(1) expect (2) accept (3) demand (4) decline



Visit CollegeDekho

**Read the given poem and answer the questions that follow. (Q. No. 39 – 45)**

Riches I hold in light esteem.
And Love I laugh to scorn.
And lust of fame was but a dream.
That vanished with the morn.
And If I praf, the only prayer
That moves my lips for me
Is 'Leave the heart that now I bear
And give me liberty !'
Yes, as my swift days near their goal,
It is all that I implore
In life and death a chainless soul
With courage to endure.

**39.** The poet does not want to be
(1) Poor and humble
(2) Proud or vile
(3) Rich and famous
(4) None of the above

**40.** The lust of fame
(1) Multiplies (2) Diminishes (3) Vanishes (4) Sharpens

**41.** In this poem, the word 'liberty' refers to
(1) life (2) death (3) riches (4) freedom

**42.** The poet says 'Love I laugh to scorn'. This is because
(1) She does not believe in love
(2) She feels the whole world is in love
(3) She believes only in the value of materialistic possessions
(4) She makes fun of everything

**43.** The word in the poem which means 'happening quickly' is
(1) esteem (2) liberty (3) swift (4) implore

**44.** The rhyme scheme of the poem is
(1) aabb (2) bbaa (3) abab (4) ba ba

**45.** The figure of speech employed in the line 'In life and death a chainless soul' is
(1) Simile
(2) Personification
(3) Metaphor
(4) Irony



Visit CollegeDekho

46. My brother is ________ talented. Sitar player and has ________ melodious voice.
The correct article to be filled in the blanks are
(1) a, an (2) a, a (3) the, the (4) an, the

47. 'Hemanth opened the garage ________ took his things out.'
The correct linker to be used is
(1) or (2) but (3) and (4) because

48. The cyclone caused ________ damage to the city.
The correct form of word to be used in the blank is
(1) extend (2) extended
(3) extension (4) extensive

49. Mrs. Latha is a teacher. She ________ teaching in the class now.
The correct word to be filled in the blank is
(1) was (2) are (3) is (4) were

50. If 'break down' means stop working, the word 'break in' means
(1) enter illegally (2) end a marriage
(3) break a pipe (4) to leave some thing

51. 'Story telling activity' in a classroom facilitates
(1) hand-eye co-ordination in children
(2) passive participation
(3) interactive teaching-learning environment
(4) reading skills

52. Constructivism in language learning focusses on
(1) engaging learners in exploring new knowledge
(2) the role of imitation
(3) memorizing grammar rules
(4) the dominant role of the teacher in the classroom

53. CCE stands for
(1) Comprehensive Continuous Evaluation
(2) Continuous Comprehensive Evaluation
(3) Common Comprehensive Evaluation
(4) Continuous Comprehensive Examination



Visit CollegeDekho

54. Classroom transaction in a language class should focus on the development of the receptive skills before the development of the productive skills. This statement is

(1) Absolutely correct
(2) Partially correct
(3) Not correct
(4) Absolutely not correct

55. When a teacher uses 'realia' in the language class, it means that she is bringing

(1) real life situations to communicate
(2) realistic targets and objectives for achievements
(3) real objects as teaching aids
(4) real activities for student level

56. Competency-based education has much in common with the approach of

(1) Translation method
(2) Rote learning
(3) Remedial teaching
(4) Task based learning

57. The purpose of remedial teaching is to

(1) introduce new language items
(2) test recently taught items
(3) teach again the language items not properly learnt
(4) teach again the language items learnt, to reinforce

58. By engaging students in dictionary work, the teacher will facilitate them to improve their

(1) listening skill
(2) writing skill
(3) reference skill
(4) speaking skill

59. In Teaching-learning process CBL stands for

(1) Competency Based Learner
(2) Competency Based Learning
(3) Child Based Learning
(4) Center Based Learning

60. Choose the Audio-visual aid from the given options.

(1) Blackboard
(2) Charts
(3) Flash cards
(4) Films



Visit CollegeDekho

# KANNADA MEDIUM
## PART – III
## CHILD DEVELOPMENT AND PEDAGOGY

**61.** ಮಗುವು ನಿಲ್ಲುವ ಸಾಮರ್ಥ್ಯವನ್ನು ಹೊಂದುವ ಮೊದಲು ನಡೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ಮಗುವು ಓಡಲು ಪ್ರಾರಂಭಿಸುವ ಮೊದಲು ನಡಿಗೆ ಕಲಿಯಬೇಕು. ಈ ಸಂಗತಿಯನ್ನು ಹೊಂದಿರುವ ಅಂಶ

(1) ನಿರಂತರತೆಯ ನಿಯಮ

(2) ವಿನ್ಯಾಸ-ಏಕರೂಪತಾ ನಿಯಮ

(3) ಬೆಳವಣಿಗೆ ನಿಯಮ

(4) ನಿರ್ದೇಶಿತ ವಿಕಸನ ತತ್ವ

**62.** ಅನುವಂಶವು ನಿರ್ಧರಿಸುವ ಮಾನವ ಗುಣ

(1) ಅಂತಃ ಪ್ರಜ್ಞೆ

(2) ಬುದ್ಧಿಶಕ್ತಿ

(3) ಒಳನೋಟ

(4) ಅಂತಃ ಪ್ರೇರಣೆ

**63.** ಮಕ್ಕಳಲ್ಲಿ ಸಾಮಾನ್ಯ ಆಸಕ್ತಿ ಮತ್ತು ಗುಣಗಳು ಭದ್ರವಾದ ಮತ್ತು ನಿಕಟ ಸ್ನೇಹವನ್ನು ಉಂಟುಮಾಡುವ ಅವಧಿ

(1) ಪೂರ್ವ ಬಾಲ್ಯಾವಧಿ

(2) ಮಧ್ಯ ಬಾಲ್ಯಾವಧಿ

(3) ಉತ್ತರ ಬಾಲ್ಯಾವಧಿ

(4) ತಾರುಣ್ಯಾವಧಿ

**64.** ಪರಸ್ಪರಾನುಕ್ರಿಯೆಯಿಂದಮೂಲತಃ'ಸ್ವ-ಕೇಂದ್ರಿತ'ದಿಂದ'ಇತರ-ಕೇಂದ್ರಿತ'ದೆಡೆಗೆಬದಲಾವಣೆಉಂಟಾಗುವ ಅವಧಿ

(1) ಶೈಶವಾವಧಿ

(2) ಶಾಲಾ ಪೂರ್ವಾವಧಿ

(3) ಶಾಲಾವಧಿ

(4) ತಾರುಣ್ಯಾವಧಿ

**65.** ವೈಗೋಟ್ಸ್ಕಿಯವರ ಪ್ರಕಾರ, ಮಕ್ಕಳ ಕಲಿಕೆಯ ಮೇಲೆ ಬಲವಾಗಿ ಪ್ರಭಾವ ಬೀರುವುದು

(1) ಸಾಮಾಜಿಕ ಅಂಶ

(2) ನೈತಿಕ ಅಂಶ

(3) ಶಾರೀರಿಕ ಅಂಶ

(4) ಸಂವೇಗಾತ್ಮಕ ಅಂಶ



Visit CollegeDekho

66. ಥರ್ಸ್‌ಟನ್‌ರವರು ವಿಭೇದೀಕರಿಸಿರುವ ಸಮೂಹ ಕಾರಕಾಂಶಗಳ ಸಂಖ್ಯೆ

(1) ಏಳು (2) ಎಂಟು (3) ಒಂಬತ್ತು (4) ಹತ್ತು

67. ಬುದ್ಧಿ ಶಕ್ತಿಯ ಬಹುಕಾರಕ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಹೋವರ್ಡ್ ಗಾರ್ಡ್‌ನರ್

(2) ಎಡ್ವರ್ಡ್ ಸ್ಪಿಯರ್‌ಮನ್

(3) ಬೆನಾರ್ಡ್ ಕೆಟಲ್

(4) ಎಲ್. ಎಲ್. ಥರ್ಸ್‌ಟನ್

68. **ಹೇಳಿಕೆ A** : ಸ್ತ್ರೀಯರ ಮೆದುಳು, ಪುರುಷರ ಮೆದುಳಿಗಿಂತ ಚಿಕ್ಕದಾಗಿರುತ್ತದೆ.

**ಹೇಳಿಕೆ B** : ಸ್ತ್ರೀಯರ ಮೆದುಳು ಹೆಚ್ಚು ತಿರುವುಗಳನ್ನು ಹೊಂದಿದ್ದು, ಮೆದುಳಿನ ಮೇಲ್ಮೈ ಹೆಚ್ಚು ಅಂಗಾಂಶಗಳನ್ನು ಹೊಂದಿದೆ.

(1) ಹೇಳಿಕೆ A ಸರಿ, ಹೇಳಿಕೆ B ತಪ್ಪು

(2) ಹೇಳಿಕೆ A ತಪ್ಪು, ಹೇಳಿಕೆ B ಸರಿ

(3) ಹೇಳಿಕೆಗಳು A ಮತ್ತು B ಸರಿಯಾಗಿದೆ

(4) ಹೇಳಿಕೆಗಳು A ಮತ್ತು B ತಪ್ಪಾಗಿದೆ

69. ಅನೌಪಚಾರಿಕ ಮತ್ತು ಔಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೊಂದಿಸಿರಿ.

| | |
|---|---|
| I. ಆಂತರಿಕ ಶಕ್ತಿ | a. ಆಯ್ಕೆಯ ಸ್ವಾತಂತ್ರ್ಯವನ್ನು ನೀಡುತ್ತದೆ |
| II. ಸಬಲೀಕರಣ | b. ಮಹಿಳೆಯರ ಕಡಿಮೆ ಸ್ಥಾನಮಾನ |
| III. ಅಧಿಕಾರದ ಪುನರ್‌ವಿತರಣೆ | c. ಸ್ವಯಂ-ಆತ್ಮವಿಶ್ವಾಸ |
| IV. ಸಮತೋಲನಾ ಶಕ್ತಿ | d. ಸಮಾನತೆಗೆ ಕಾರಣವಾಗುತ್ತದೆ |

(1) I – a, II – b, III – c, IV - d

(2) I – b, II – c, III – d, IV – a

(3) I – c, II – a, III – d, IV – b

(4) I – b, II – c, III – a, IV – d

70. A ವ್ಯಕ್ತಿಯ ಕೈ-ಬರಹವು, B ವ್ಯಕ್ತಿಯ ಕೈ-ಬರಹಕ್ಕಿಂತ ಉತ್ತಮವಾಗಿದೆ. ಈ ಬರವಣಿಗೆಯಲ್ಲಿನ ಭಿನ್ನತೆಗೆ ಕಾರಣ

(1) ಅಧ್ಯಯನ ಅಭ್ಯಾಸ

(2) ಮನೋಚಲನಾತ್ಮಕ ಕೌಶಲ

(3) ಅಭಿಕ್ಷಮತೆ

(4) ಆಸಕ್ತಿ



Visit CollegeDekho

71. ಶಾಲಾ ಶಿಕ್ಷಣದಲ್ಲಿ ವ್ಯಕ್ತಿ-ಅಧ್ಯಯನವನ್ನು ಬಳಸುವುದರ ಕಾರಣ

(1) ಇದು ಪ್ರಾಯೋಗಿಕ ಅಂಶಗಳ ಮೇಲೆ ಹೆಚ್ಚಿನ ಸೈದ್ಧಾಂತಿಕ ಮಾಹಿತಿ ಒದಗಿಸುತ್ತದೆ

(2) ಇದು ಸಮಸ್ಯೆಯನ್ನು ಪ್ರತಿಬಿಂಬಿಸುವ ಹೇಳಿಕೆ ಒದಗಿಸುತ್ತದೆ

(3) ಇದು ಅಭ್ಯಾಸ ಮಾಡಲು ತುಂಬಾ ಸರಳವಾಗಿದ್ದು ಕಡಿಮೆ ಕಾಲಾವಧಿ ತೆಗೆದುಕೊಳ್ಳುತ್ತದೆ

(4) ಇದು ವಿದ್ಯಾರ್ಥಿಗಳನ್ನು ಸಂಶೋಧನೆ ಮತ್ತು ಪ್ರತಿಕ್ರಿಯಾ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುತ್ತದೆ

72. ವಿದ್ಯಾರ್ಥಿಗಳಲ್ಲಿ ತೀರ್ಮಾನಿಸುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ

(1) ಅಂತಃ ಪ್ರಜ್ಞೆ

(2) ತಾರ್ಕಿಕತೆ

(3) ವೀಕ್ಷಣೆ

(4) ವಿಶ್ಲೇಷಣೆ

73. ಕಲಿಕೆಗೆ ಸಂಬಂಧಿಸಿದಂತೆ ಸ್ವ-ಮಾಪನಕ್ಕೆ ಸಂಬಂಧಿಸದ ಸಾಧನ

(1) ರೂಬ್ರಿಕ್ಸ್ ಮೂಲಕ ಮಾಪಿಸುವುದು

(2) ಪ್ರತಿಕ್ರಿಯಾ ಹಾಳೆ

(3) ತಾಳೆ-ಪಟ್ಟಿ

(4) ತರಗತಿ ಪರೀಕ್ಷೆ

74. ವಿದ್ಯಾರ್ಥಿಗಳಲ್ಲಿ ಉನ್ನತ ಮಟ್ಟದ ಯೋಚನಾ ಕೌಶಲವನ್ನು ಪರೀಕ್ಷಿಸುವಲ್ಲಿ ಬೆಂಬಲಿಸದ ಕಾರ್ಯಕ್ಷಮತೆ ಆಧಾರಿತ ಮಾಪನದ ಸಂಗತಿಗಳು.

(1) ಅನುಗಮನಾತ್ಮಕ ಮತ್ತು ನಿಗಮನಾತ್ಮಕ ವಿವೇಚನೆ ಬಳಸುವುದು

(2) ಜ್ಞಾನಾಧಾರಿತ ಮಾಹಿತಿಯನ್ನು ಪುನರ್ ಉತ್ಪಾದಿಸುವುದು

(3) ತೀರ್ಮಾನವನ್ನು ತೆಗೆದುಕೊಳ್ಳಲು ಅಗತ್ಯವಾದ ಮಾಹಿತಿ ಸಂಶ್ಲೇಷಿಸುವುದು

(4) ಮಾಹಿತಿಯ ಮೂಲಗಳ ವಿಶ್ವಾಸಾರ್ಹತೆಯನ್ನು ಮೌಲ್ಯೀಕರಿಸುವುದು

75. ವಿದ್ಯಾರ್ಥಿಯು ಪದವನ್ನು ಉಚ್ಚರಿಸುವಾಗ, ಆ ಕ್ಷಣದಲ್ಲಿ ಪದವನ್ನು ನೆನಪಿಸಿಕೊಳ್ಳಲಾಗದೆ ಉಚ್ಚಾರಣೆಯಲ್ಲಿ ಅಡಚಣೆ ಉಂಟಾಗುತ್ತದೆ. ಈ ಸನ್ನಿವೇಶದಲ್ಲಿ ಗಮನಿಸಬಹುದಾದ ಕಲಿಕಾ ನ್ಯೂನತೆಯ ವಿಧ

(1) ಡಿಸ್‌ಪ್ರೆಕ್ಸಿಯಾ

(2) ಡಿಸ್‌ಟೋಪಿಯಾ

(3) ಡಿಸ್‌ನೋಮಿಯಾ

(4) ಡಿಸ್‌ಫೇಸಿಯಾ



Visit CollegeDekho

76. ADHD ಯ ವಿಸ್ತೃತ ರೂಪ

(1) ಅಟೆನ್ಷನ್ ಡಿಫಿಸಿಟ್ ಹೈಪರ್ ಆಕ್ಟಿವಿಟಿ ಡಿಸ್‌ಆರ್ಡರ್

(2) ಅಟೆನ್ಷನ್ ಡಿಫಿಸಿಟ್ ಹೈಪೋ ಆಕ್ಟಿವಿಟಿ ಡಿಸ್‌ಆರ್ಡರ್

(3) ಆಟಿಸಂ ಡಿಫಿಸಿಟ್ ಹೈಪರ್ ಆಕ್ಟಿವಿಟಿ ಡಿಸ್‌ಆರ್ಡರ್

(4) ಆಟಿಸಂ ಡಿಫಿಸಿಟ್ ಹೈಪೋ ಆಕ್ಟಿವಿಟಿ ಡಿಸ್‌ಆರ್ಡರ್

77. ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರಕಾರ 35 – 49 ರವರೆಗಿನ (IQ) ಬುದ್ಧಿಶಕ್ತಿ ಸೂಚ್ಯಾಂಕ ಹೊಂದಿರುವ ವ್ಯಕ್ತಿಯ ಬೌದ್ಧಿಕ ದುರ್ಬಲತೆಯನ್ನು ವಿಂಗಡಿಸಿರುವ ರೀತಿ

(1) ಕಡಿಮೆ

(2) ತೀವ್ರತೆ

(3) ಮಧ್ಯಮ

(4) ಹೆಚ್ಚು

78. ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ 'ವೇಗೋತ್ಕರ್ಷಕ್ಕೆ' ಸರಿಯಲ್ಲದ ಹೇಳಿಕೆ

(1) ಮಾನಸಿಕ ವಯಸ್ಸಿಗೆ ಪೂರಕವಾಗಿ ಶಾಲೆಗೆ ಶೀಘ್ರ ದಾಖಲಾತಿಯನ್ನು ನೀಡುವುದು

(2) ಶ್ರೇಣಿ ಅಥವಾ ತರಗತಿಯನ್ನು ತಪ್ಪಿಸಿ ತೇರ್ಗಡಿಸುವುದು

(3) ಕಾರ್ಯಯೋಜನೆ ಸ್ವತಂತ್ರವಾಗಿ ರೂಪಿಸುವುದು

(4) ಪೂರ್ವಭಾವಿ ಕಾರ್ಯ ನಿಯೋಜನೆ

79. ತರಗತಿ ಸನ್ನಿವೇಶದಲ್ಲಿ ಬೋಧನೆಯ ಬಗ್ಗೆ ಸರಿಯಲ್ಲದ ಹೇಳಿಕೆ

(1) ಬೋಧನೆ ಮಾರ್ಪಡಿಸಬಹುದು

(2) ಬೋಧನೆಯು ಔಪಚಾರಿಕ ಮತ್ತು ಅನೌಪಚಾರಿಕವಾಗಿದೆ

(3) ಬೋಧನೆಯು ವಿಜ್ಞಾನ ಹಾಗೂ ಕೌಶಲವಾಗಿದೆ

(4) ಬೋಧನೆಯು ಒಂದು ಸೂಚನೆ

80. ಪ್ರಾಥಮಿಕ ಹಂತದಲ್ಲಿ ಕಲಿಕೆಯನ್ನು ಅನುಕೂಲಿಸುವ ಸೂಕ್ತ ಮಾರ್ಗ

(1) ದೃಶ್ಯ ನಟನೆ

(2) ಪ್ರಾತ್ಯಕ್ಷಿಕೆ

(3) ಕೈ-ಕೆಲಸ

(4) ಸ್ವಯಂಅಧ್ಯಯನ



Visit CollegeDekho

81. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕಲಿಸುವ ಉತ್ತಮ ತಂತ್ರ
(1) ತರಗತಿಯಲ್ಲಿ ಚರ್ಚೆಗೆ ಅವಕಾಶ ನೀಡುವುದು
(2) ಶಿಕ್ಷಕರಿಂದ ಪ್ರಾತ್ಯಕ್ಷಿಕೆ
(3) ಸಹಭಾಗಿ ಮತ್ತು ಗುಂಪು ಬೋಧನೆಯ ಮೂಲಕ ವಿಷಯವನ್ನು ಅನುಕೂಲಿಸುವುದು
(4) ಸಾಮರ್ಥ್ಯಾಧಾರಿತ ಮಕ್ಕಳ ಗುಂಪನ್ನು ಮಾಡುವುದು

82. ಕಲಿಯುವವನಲ್ಲಿ ಸ್ವ-ನಿಯಂತ್ರಣವನ್ನು ಪರಿಭಾಷಿಸುವುದು
(1) ತಮ್ಮದೇ ಕಲಿಕೆಯನ್ನು ಪರಿವೀಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯ
(2) ವಿದ್ಯಾರ್ಥಿ ವರ್ತನೆಗೆ ಸೂಕ್ತ ನಿಯಮಾವಳಿ ಸೃಷ್ಟಿಸುವುದು
(3) ವಿದ್ಯಾರ್ಥಿಗಳ ಗುಂಪು (ಮಂಡಳಿ) ನಿಯಮ ಮತ್ತು ನಡಾವಳಿಯನ್ನು ರೂಪಿಸುತ್ತದೆ
(4) ವಿದ್ಯಾರ್ಥಿಯು ಕಲಿಕೆಯಲ್ಲಿ ಸ್ವಯಂ-ನಿಯಂತ್ರಣದ ಮೂಲಕ ಸ್ವತಃ ಏಕಾಂಗಿಯಾಗುವುದು

83. ಪ್ರಸ್ತುತ ಸನ್ನಿವೇಶದಲ್ಲಿ ಪೂರಕವಾಗಿ ಹೊಸ ಮಾಹಿತಿಯನ್ನು ಸೇರ್ಪಡಿಸುವ ಪ್ರಕ್ರಿಯೆ
(1) ಹೊಂದಾಣಿಕೆ
(2) ಸರಿದೂಗಿಸುವಿಕೆ
(3) ಸಂಯೋಜಿಸುವಿಕೆ
(4) ಸಂಘಟಿಸುವಿಕೆ

84. ತರಗತಿಯಲ್ಲಿ ಒಬ್ಬ ವಿದ್ಯಾರ್ಥಿನಿಯು, ಹುಡುಗ (ವಿದ್ಯಾರ್ಥಿ)ನ ಪಕ್ಕ ಕುಳಿತುಕೊಳ್ಳಲು ಒಪ್ಪಿಕೊಳ್ಳುವುದಿಲ್ಲ. ಈ ರೀತಿಯ ಒಪ್ಪದಿರುವಿಕೆಗೆ ಕಾರಣ
(1) ವಿಷಮಜಾತೀಯ ನೈತಿಕತೆ
(2) ಸಂಜ್ಞಾನಾತ್ಮಕ ಅಪರಿಪಕ್ವತೆ
(3) ಪ್ರತಿಕ್ರಿಯೆ
(4) ಸಹಕಾರದ ನೈತಿಕತೆ

85. ಒಬ್ಬ ವಿದ್ಯಾರ್ಥಿಯು ಸಮಸ್ಯೆಯನ್ನು ತಾನೆ ಪರಿಹರಿಸಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಶಿಕ್ಷಕರು ಗಮನಿಸುತ್ತಾರೆ ಮತ್ತು ಆ ವಿದ್ಯಾರ್ಥಿಯು ಅದನ್ನು ತನ್ನ ಹಿರಿಯ ವಿದ್ಯಾರ್ಥಿಯ ಸಹಾಯವನ್ನು ಉಪಯೋಗಿಸಿ ಪರಿಹರಿಸಿಕೊಳ್ಳುತ್ತಾನೆ.
ಈ ರೀತಿಯ ಮಾರ್ಗದರ್ಶನ ಕ್ರಿಯೆಯನ್ನು ಗುರುತಿಸುವ ರೀತಿ
(1) ಪಾರ್ಶ್ವತೆ
(2) ಪೂರ್ವ-ತಯಾರಿಕಾ ಆಲೋಚನೆ
(3) ಸಹಾಯಕ ಕಲಿಕಾ ತತ್ವ
(4) ಬೆಂಬಲ


Visit CollegeDekho

86. ಶಾಲೆಯ ಶಿಕ್ಷಕನನ್ನು ಒಂದು ಸಮಿತಿಯ ಮುಖ್ಯಸ್ಥನಾಗಿ ಹೆಸರಿಸಲಾಗುತ್ತದೆ. ಆ ಶಿಕ್ಷಕನನ್ನು ಸಮಿತಿಯ ಅಧ್ಯಕ್ಷ ವ್ಯಕ್ತಿ (Chairman) ಗೆ ಬದಲಾಗಿ 'ಸಮಿತಿಯ ಅಧ್ಯಕ್ಷ' ಎಂದು ಹೆಸರಿಸಲಾಯಿತು. ಇಲ್ಲಿ ಶಿಕ್ಷಕನು ಅನುಸರಿಸಿರುವ ಕ್ರಮ

(1) ಒಪ್ಪಿಕೊಳ್ಳುವ ಪದ
(2) ಭಾಷೆಯ ಮೇಲಿನ ಉತ್ತಮ ಹಿಡಿತ
(3) ಲಿಂಗ ನಿರ್ಬಂಧವಿಲ್ಲದ ಭಾಷಾ ಬಳಕೆ
(4) ಲಿಂಗ ಪಕ್ಷಪಾತ ಧೋರಣೆ

87. ಈ ಕೆಳಗಿನವುಗಳಲ್ಲಿ ಕೇಂದ್ರೀಕೃತ ಆಲೋಚನೆಯನ್ನು ಉತ್ತಮವಾಗಿ ಅಭಿವ್ಯಕ್ತಗೊಳಿಸುವುದು

(1) ಶಾಲೆ
(2) ಪ್ರಬಂಧ
(3) ಮನೆ ಕೆಲಸ
(4) ಪ್ರಮೇಯ

88. ತರಗತಿ ಸನ್ನಿವೇಶದಲ್ಲಿ, ಬೋಧನಾ ವಿಧಾನಗಳಾದ ಆಟ –ವಿಧಾನ ಮತ್ತು ಅನ್ವೇಷಣಾ ವಿಧಾನಗಳು ಒಳಗೊಳ್ಳುವ ಬೋಧನಾ ವಿಧಾನ

(1) ವಿದ್ಯಾರ್ಥಿ ಕೇಂದ್ರಿತ ವಿಧಾನ
(2) ಸೂಚನಾ ವಿಧಾನ
(3) ಶಿಕ್ಷಕ ಕೇಂದ್ರಿತ ವಿಧಾನ
(4) ಪಠ್ಯ ಕೇಂದ್ರಿತ ವಿಧಾನ

89. ತರಗತಿ ಕಾರ್ಯನಿರ್ವಹಣೆಯಲ್ಲಿ ಬಹುಮಾನ ಮತ್ತು ಶಿಕ್ಷೆ ನೀಡುವ ಪ್ರಕ್ರಿಯೆಯು

(1) ಉದ್ದೀಪನ ಬದಲಾಯಿಸುವುದು
(2) ಸಹಜ ಪ್ರಚೋದನಾ ಸಂಸ್ಕರಣ
(3) ಪುನರ್ಬಲನ
(4) ಸಹಕಾರತ್ವ

90. ಮಾಸ್ಲೋರವರ ಪ್ರಕಾರ ಶ್ರೇಣೀಕೃತ ಪ್ರೇರಣಾ ಹಂತ ವಿಭಜನೆಯಲ್ಲಿ 'ಆತ್ಮಸಾಕ್ಷಾತ್ಕಾರ' ಹಂತದ ಸಂಖ್ಯೆ

(1) ಮೊದಲನೇ ಹಂತ
(2) ಮೂರನೇ ಹಂತ
(3) ನಾಲ್ಕನೇ ಹಂತ
(4) ಐದನೇ ಹಂತ



Visit CollegeDekho

## KANNADA MEDIUM
## PART – IV
## SOCIAL SCIENCE

91. ಅ – ಪಟ್ಟಿಯಲ್ಲಿ ಸ್ಥಾಪಕರು ಮತ್ತು ಬ – ಪಟ್ಟಿಯಲ್ಲಿ ಅವರು ಸ್ಥಾಪಿಸಿದ ರಾಜವಂಶಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

| ಅ – ಪಟ್ಟಿ | ಬ – ಪಟ್ಟಿ |
|---|---|
| a. ಸಿಮುಖ | i. ಗಂಗರು |
| b. ರಾಜಾ ಜಯಸಿಂಹ | ii. ಕುಶಾನರು |
| c. ಪುಷ್ಯಭೂತಿ | iii. ಶಾತವಾಹನರು |
| d. ಕುಜಲಕಡ್ ಫೀಸಸ್ | iv. ವರ್ಧನರು |
| | v. ಬಾದಾಮಿ ಚಾಲುಕ್ಯರು |

| | a | b | c | d |
|---|---|---|---|---|
| (1) | i | ii | iii | iv |
| (2) | iv | iii | ii | v |
| (3) | iii | v | iv | ii |
| (4) | ii | v | iii | i |

92. ಕೊಟ್ಟಿರುವ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.

**ಪ್ರತಿಪಾದನೆ (A) :** ಲಾರ್ಡ್ ಕಾರ್ನ್‌ವಾಲೀಸನು ಭಾರತೀಯರಿಗೆ ಮಾತ್ರ ಕೆಳದರ್ಜೆಯ ಉದ್ಯೋಗಗಳನ್ನು ನೀಡಿದನು.

**ಸಮರ್ಥನೆ (R) :** ಲಾರ್ಡ್ ಕಾರ್ನ್‌ವಾಲೀಸನು ''ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ'' ಎಂದು ವಾದಿಸಿದನು.

(1) 'A' ಮತ್ತು 'R' ಎರಡೂ ಸರಿ ಮತ್ತು 'R' 'A' ನ ಸರಿಯಾದ ವಿವರಣೆಯಾಗಿದೆ

(2) 'A' ಮತ್ತು 'R' ಎರಡೂ ಸರಿ ಆದರೆ 'R' 'A' ನ ಸರಿಯಾದ ವಿವರಣೆಯಾಗಿಲ್ಲ

(3) 'A' ಸರಿ ಆದರೆ 'R' ತಪ್ಪು

(4) 'R' ಸರಿ ಆದರೆ 'A' ತಪ್ಪು



Visit CollegeDekho

93. ಕೊಟ್ಟಿರುವ ಘಟನೆಗಳ ಸರಿಯಾದ ಕಾಲಾನುಕ್ರಮಣಿಕೆಯು

a. ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಸ್ಥಾಪನೆ.

b. ಕಾನ್‌ಸ್ಟಾಂಟಿನೋಪಲನ್ನು ಟರ್ಕರು ವಶಪಡಿಸಿಕೊಂಡಿದ್ದರು.

c. ರಕ್ಕಸತಂಗಡ್ಡಿ ಕದನ.

d. ಭಾರತಕ್ಕೆ ಹೊಸ ಜಲಮಾರ್ಗವನ್ನು ವಾಸ್ಕೋಡಗಾಮನು ಕಂಡುಹಿಡಿದನು.

(1) a b c d

(2) b d a c

(3) d c b a

(4) b c a d

94. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು

(1) ಲಾಲಾ ಲಜಪತ್ ರಾಯ್

(2) ಬಾಲ ಗಂಗಾಧರ ತಿಲಕ್

(3) ಸರ್ದಾರ್ ವಲ್ಲಭಭಾಯಿ ಪಟೇಲ್

(4) ಸುಭಾಷ್‌ಚಂದ್ರ ಬೋಸ್

95. "ಧರ್ಮಚಕ್ರ ಪ್ರವರ್ತನ " ಎಂದರೆ

(1) ಬುದ್ಧನ ಜನನ

(2) ಬುದ್ಧನು ಅರಮನೆಯನ್ನು ತೊರೆದದ್ದು

(3) ಬುದ್ಧನ ಮರಣ

(4) ಬುದ್ಧನ ಮೊದಲ ಬೋಧನೆ

96. "ಅನುಭವ ಮಂಟಪ" ವನ್ನು ಸ್ಥಾಪಿಸಿದವರು

(1) ಶಂಕರಾಚಾರ್ಯರು

(2) ಮಧ್ವಾಚಾರ್ಯರು

(3) ಬಸವಣ್ಣನವರು

(4) ರಾಮಾನುಜಾಚಾರ್ಯರು

97. ಸಿಂಧೂ–ಸರಸ್ವತಿ ನಾಗರಿಕತೆಯ ಕಾಲದ ಪ್ರಮುಖ ಬಂದರು

(1) ಹರಪ್ಪ

(2) ಮೊಹೆಂಜೊದಾರೋ

(3) ಧೋಲವೀರಾ

(4) ಲೋಥಾಲ್

98. ಅಡಾಲ್ಫ್ ಹಿಟ್ಲರ್‌ನ ಸಾಮೂಹಿಕ ಕಗ್ಗೊಲೆಗಳನ್ನು ಹೀಗೆನ್ನುವರು

(1) ಹೊಲೊಕಾಸ್ಟ್

(2) ನಾಜಿ

(3) ಫ್ಯೂರರ್

(4) ಗೊಬೆಲ್ಸ್



Visit CollegeDekho

99. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮತ್ತು ಮೂರನೇ ಪದಕ್ಕೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಎರಡನೇ ಆಂಗ್ಲೋ-ಮೈಸೂರು ಯುದ್ಧ : ಮಂಗಳೂರು ಒಪ್ಪಂದ : : ಮೂರನೇ ಆಂಗ್ಲೋ-ಮೈಸೂರು ಯುದ್ಧ : ________.

(1) ಮದ್ರಾಸ್ ಒಪ್ಪಂದ
(2) ಶ್ರೀರಂಗಪಟ್ಟಣ ಒಪ್ಪಂದ
(3) ಸಾಲ್ಬಾಯಿ ಒಪ್ಪಂದ
(4) ಬೆಸ್ಸೀನ್ ಒಪ್ಪಂದ

100. ಈ ಕೆಳಗಿನ ಹೇಳಿಕೆಗಳನ್ನು ಓದಿರಿ.

a. ಇವರು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಶುಲ್ಕವನ್ನು ರದ್ದುಪಡಿಸಿದರು.
b. ಇವರು ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಪ್ರಾರಂಭಿಸಿದರು.
c. ಇವರು ಬೆಳಗೋಳದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿದರು.
d. ಇವರು ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದರು.

ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ಜಯಚಾಮರಾಜ ಒಡೆಯರ್
(2) ಹತ್ತನೇ ಚಾಮರಾಜ ಒಡೆಯರ್
(3) ಚಿಕ್ಕದೇವರಾಜ ಒಡೆಯರ್
(4) ನಾಲ್ವಡಿ ಕೃಷ್ಣರಾಜ ಒಡೆಯರ್

101. ಭಾರತದ ಪುನರುಜ್ಜೀವನದ ಪಿತಾಮಹ

(1) ರಾಜಾರಾಮ್ ಮೋಹನ್ ರಾಯ್
(2) ಸ್ವಾಮಿ ದಯಾನಂದ ಸರಸ್ವತಿ
(3) ಜ್ಯೋತಿಬಾ ಫುಲೆ
(4) ಸ್ವಾಮಿ ವಿವೇಕಾನಂದ

102. ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸಮಾಜವಾದಿಗಳು ತಮ್ಮ ಕಾರ್ಯತಂತ್ರವನ್ನು ಈ ಗುಂಪಿನ ಹೆಸರಿನಲ್ಲಿ ಅನುಷ್ಠಾನಕ್ಕೆ ತಂದರು

(1) ದಿ ಫಾರ್ವರ್ಡ್ ಬ್ಲಾಕ್
(2) ದಿ ಫ್ರೀಡಂ ಸ್ಟ್ರಗಲ್ ಫ್ರಂಟ್
(3) ಸಮಾಜವಾದಿ ಕಾಂಗ್ರೆಸ್ ಪಕ್ಷ
(4) ಭಾರತೀಯ ರಾಷ್ಟ್ರೀಯ ಸೇನೆ

103. ಭಾರತದ ಸಂಸತ್ತು ಪೌರತ್ವ ಕಾಯಿದೆಯನ್ನು ಜಾರಿಗೆ ತಂದ ವರ್ಷ

(1) 1953
(2) 1954
(3) 1955
(4) 1956



Visit CollegeDekho

**104.** ಭಾರತದಲ್ಲಿ ಮತದಾನದ ವಯಸ್ಸನ್ನು 21 ವರ್ಷಗಳಿಂದ 18 ವರ್ಷಗಳಿಗೆ ಇಳಿಸಿದ ಸಂವಿಧಾನದ ತಿದ್ದುಪಡಿ

(1) 24ನೇ ತಿದ್ದುಪಡಿ
(2) 52ನೇ ತಿದ್ದುಪಡಿ
(3) 61ನೇ ತಿದ್ದುಪಡಿ
(4) 69ನೇ ತಿದ್ದುಪಡಿ

**105.** ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಮೊಕದ್ದಮೆಯನ್ನು ವಿಚಾರಣೆ ಮಾಡಕೂಡದೆಂದು ಸರ್ವೋಚ್ಚ ನ್ಯಾಯಾಲಯ ಹೊರಡಿಸುವ ಲಿಖಿತ ರೂಪದ ಆಜ್ಞೆ

(1) ಬಂಧೀ ಪ್ರತ್ಯಕ್ಷೀಕರಣ
(2) ಪರಮಾದೇಶ
(3) ಸರ್ಷಿಯೋರರಿ
(4) ಪ್ರತಿಬಂಧಕಾಜ್ಞೆ

**106.** ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಲು ರಾಷ್ಟ್ರಪತಿಯವರಿಗೆ ಅಧಿಕಾರ ನೀಡುವ ಸಂವಿಧಾನದ ವಿಧಿ

(1) 352 ನೇ ವಿಧಿ
(2) 356 ನೇ ವಿಧಿ
(3) 360 ನೇ ವಿಧಿ
(4) 371 ನೇ ವಿಧಿ

**107.** A ಪಟ್ಟಿಯನ್ನು B ಪಟ್ಟಿಯೊಂದಿಗೆ ಹೊಂದಿಸಿ ಸರಿಯಾದ ಉತ್ತರವನ್ನು ಗುರುತಿಸಿ.

| ಪಟ್ಟಿ – A | ಪಟ್ಟಿ – B |
|---|---|
| A. ಉತ್ತರ ಕಮಾಂಡ್ | 1. ಪುಣೆ |
| B. ದಕ್ಷಿಣ ಕಮಾಂಡ್ | 2. ಮಾವ್ |
| C. ಕೇಂದ್ರ ಕಮಾಂಡ್ | 3. ಉದಾಂಪುರ್ |
| D. ತರಬೇತಿ ಕಮಾಂಡ್ | 4. ಲಕ್ನೋ |

(1) A – 2, B – 3, C – 1, D – 4
(2) A – 2, B – 1, C – 3, D – 4
(3) A – 1, B – 2, C – 3, D – 4
(4) A – 3, B – 1, C – 4, D – 2

A 4
B 2
C 1
D -3

**108.** 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ.' – ಈ ಹೇಳಿಕೆಯನ್ನು ನೀಡಿದವರು

(1) ಅಬ್ರಹಾಂ ಲಿಂಕನ್
(2) ಐಸನ್ ಹೋವರ್
(3) ಜಾನ್ ಮಥಾಯಿ
(4) ನೆಲ್ಸನ್ ಮಂಡೇಲ



Visit CollegeDekho

109. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

a. ಅಮೆರಿಕಾ, ರಷ್ಯಾ , ಬ್ರಿಟನ್, ಫ್ರಾನ್ಸ್ ಹಾಗೂ ಚೀನಾ ಭದ್ರತಾ ಸಮಿತಿಯ ಶಾಶ್ವತ ಸದಸ್ಯ ರಾಷ್ಟ್ರಗಳಾಗಿವೆ.

b. ಯುನೆಸ್ಕೋದ ಕೇಂದ್ರ ಕಛೇರಿ ಪ್ಯಾರಿಸ್‌ನಲ್ಲಿದೆ.

c. ವಿಶ್ವ ವ್ಯಾಪಾರ ಸಂಘ ಜನವರಿ 1, 1995 ರಂದು ಸ್ಥಾಪನೆಯಾಯಿತು.

d. ವಿಶ್ವಸಂಸ್ಥೆಯ ವಾರ್ಷಿಕ ಆಯವ್ಯಯ ಪಟ್ಟಿಗೆ ಸಾಮಾನ್ಯ ಸಭೆಯ ಅನುಮೋದನೆ ಅವಶ್ಯಕವಾಗಿರುತ್ತದೆ.

ಈ ಮೇಲಿನ ಹೇಳಿಕೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮತ್ತು b ಮಾತ್ರ ಸರಿ
(2) b ಮತ್ತು c ಮಾತ್ರ ಸರಿ
(3) b, c ಮತ್ತು d ಮಾತ್ರ ಸರಿ
(4) a, b, c ಮತ್ತು d ಸರಿ

110. ರಾಜ್ಯಸಭೆಗೆ ರಾಷ್ಟ್ರಪತಿಯವರು ನಾಮಕರಣ ಮಾಡುವ ಸದಸ್ಯರ ಸಂಖ್ಯೆ

(1) 08 (2) 10 (3) 12 (4) 14

111. ಹಿಮನದಿಯಿಂದ ನಿರ್ಮಾಣವಾಗುವ ಭೂಸ್ವರೂಪ

(1) U ಆಕಾರದ ಕಣಿವೆಗಳು
(2) V ಆಕಾರದ ಕಣಿವೆಗಳು
(3) ಲ್ಯಾಪೀಸ್
(4) ಅಂತರ್‌ಗುಹೆ

112. ವಾಯುಮಂಡಲದ ಅತ್ಯಂತ ಮೇಲಿನ ಪದರ

(1) ಉಷ್ಣತಾ ಮಂಡಲ
(2) ಮಧ್ಯಂತರ ಮಂಡಲ
(3) ಬಾಹ್ಯಮಂಡಲ
(4) ಪರಿವರ್ತನಾ ಮಂಡಲ

113. ಉಷ್ಣಸಾಗರ ಪ್ರವಾಹಕ್ಕೆ ಉದಾಹರಣೆ

(1) ಬೆಂಗ್ವುಲಾ (2) ಗಲ್ಫ್ ಸ್ಟ್ರೀಂ (3) ಫಾಕ್‌ಲ್ಯಾಂಡ್ (4) ಲಾಬ್ರಡಾರ್

114. ಕೆಳಗಿನವುಗಳಲ್ಲಿ ಸರಿಯಾದ ಜೋಡಿಯನ್ನು ಗುರುತಿಸಿ.

(1) 0° ಅಕ್ಷಾಂಶ : ಕರ್ಕಾಟಕ ಸಂಕ್ರಾಂತಿ ವೃತ್ತ
(2) 23½° ಉತ್ತರ ಅಕ್ಷಾಂಶ : ಸಮಭಾಜಕ ವೃತ್ತ
(3) 66½° ಉತ್ತರ ಅಕ್ಷಾಂಶ : ಮಕರ ಸಂಕ್ರಾಂತಿ ವೃತ್ತ
(4) 66½° ದಕ್ಷಿಣ ಅಕ್ಷಾಂಶ : ಅಂಟಾರ್ಕ್ಟಿಕ್ ವೃತ್ತ

115. ಕೂಪರ್ ಕ್ರೀಕ್ ಮತ್ತು ಡೈಮಂಟಿನಾ ನದಿಗಳು ಕಂಡುಬರುವುದು

(1) ಆಸ್ಟ್ರೇಲಿಯಾ (2) ಉತ್ತರ ಅಮೆರಿಕಾ (3) ದಕ್ಷಿಣ ಅಮೆರಿಕಾ (4) ಆಫ್ರಿಕಾ



Visit CollegeDekho

**116.** ದಕ್ಷಿಣ ಏಷ್ಯಾದಲ್ಲಿ ಕಂಡುಬರುವ ದೇಶಗಳ ಸರಿಯಾದ ಗುಂಪು

(1) ಇರಾನ್, ಇರಾಕ್ ಮತ್ತು ಕುವೈತ್
(2) ಭಾರತ, ಮಾಲ್ಡೀವ್ಸ್ ಮತ್ತು ಶ್ರೀಲಂಕಾ
(3) ಮಾಲ್ಡೀವ್ಸ್, ಮಯನ್ಮಾರ್ ಮತ್ತು ಮಲೇಷ್ಯಾ
(4) ಭಾರತ, ಮಯನ್ಮಾರ್ ಮತ್ತು ಸಿಂಗಾಪುರ

**117.** ಕೆಳಗಿನವುಗಳಲ್ಲಿ ಮಲೆನಾಡಿನ ಜಿಲ್ಲೆಗಳನ್ನು ಗುರುತಿಸಿ.

a. ಕೊಡಗು
b. ಶಿವಮೊಗ್ಗ
c. ಉಡುಪಿ
d. ಉತ್ತರ ಕನ್ನಡ

(1) a ಮತ್ತು c
(2) b ಮತ್ತು d
(3) a ಮತ್ತು b
(4) b ಮತ್ತು c

**118.** ಕೆಳಗಿನ ಹೇಳಿಕೆಗಳನ್ನು ಓದಿರಿ.

a. ಇದು ದಕ್ಷಿಣ ಭಾರತದ ಎರಡನೇ ಮುಖ್ಯ ನದಿ.
b. ಇದು ಮಹಾಬಲೇಶ್ವರದಲ್ಲಿ ಉಗಮ ಹೊಂದುತ್ತದೆ.
c. ಭೀಮ, ಘಟಪ್ರಭ ಮತ್ತು ಮಲಪ್ರಭ ಇದರ ಉಪನದಿಗಳಾಗಿವೆ.

ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ಕಾವೇರಿ ನದಿ
(2) ಕೃಷ್ಣಾ ನದಿ
(3) ನರ್ಮದಾ ನದಿ
(4) ಗೋದಾವರಿ ನದಿ

**119.** ಕರ್ನಾಟಕದ ಅತ್ಯಂತ ಆಳವಾದ ಚಿನ್ನದ ಗಣಿ

(1) ಚಾಂಪಿಯನ್ ರೀಫ್
(2) ನಂದಿದುರ್ಗ
(3) ಉರಿಗಾಂ
(4) ಮೈಸೂರು ಗಣಿ

**120.** 'ಗಿರ್' ರಾಷ್ಟ್ರೀಯ ಉದ್ಯಾನವನ ಕಂಡುಬರುವುದು

(1) ಬಿಹಾರ
(2) ಅಸ್ಸಾಂ
(3) ಮಧ್ಯಪ್ರದೇಶ
(4) ಗುಜರಾತ್

**121.** 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಎಂಬ ಶೀರ್ಷಿಕೆಯ ಪುಸ್ತಕವನ್ನು ಪ್ರಕಟಿಸಿದವರು

(1) ಡಾ. ನಾರ್ಮನ್ ಬೋರ್ಲಾಗ್
(2) ಡಾ. ಬಾಬು ರಾಜೇಂದ್ರ ಪ್ರಸಾದ್
(3) ಡಾ. ಎಂ.ಎಸ್. ಸ್ವಾಮಿನಾಥನ್
(4) ಸರ್ ಎಂ. ವಿಶ್ವೇಶ್ವರಯ್ಯ

**122.** 'ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ' ಪ್ರಾಮುಖ್ಯತೆ ನೀಡಿದ ಪಂಚವಾರ್ಷಿಕ ಯೋಜನೆ

(1) ಐದನೆಯ ಪಂಚವಾರ್ಷಿಕ ಯೋಜನೆ
(2) ನಾಲ್ಕನೆಯ ಪಂಚವಾರ್ಷಿಕ ಯೋಜನೆ
(3) ಹನ್ನೊಂದನೆಯ ಪಂಚವಾರ್ಷಿಕ ಯೋಜನೆ
(4) ಮೂರನೆಯ ಪಂಚವಾರ್ಷಿಕ ಯೋಜನೆ


Visit CollegeDekho

123. ನೀತಿ ಆಯೋಗ ಸ್ಥಾಪನೆಯಾದದ್ದು

(1) ಜೂನ್ 5, 2015
(2) ಜನವರಿ 1, 2015
(3) ಜೂನ್ 5, 2016
(4) ಏಪ್ರಿಲ್ 1, 2014

124. 'ಭಾರತದ ನೈಜ ಅಭಿವೃದ್ಧಿಯೆಂದರೆ, ಆದರ ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು

(1) ಮಹಾತ್ಮ ಗಾಂಧೀಜಿ
(2) ಸ್ವಾಮಿ ವಿವೇಕಾನಂದ
(3) ಮಹಾತ್ಮ ಜ್ಯೋತಿಬಾ ಫುಲೆ
(4) ಬಾಲಗಂಗಾಂಧರ ತಿಲಕ್

125. A ಪಟ್ಟಿಯಲ್ಲಿ ದೇಶಗಳ ಹೆಸರುಗಳು ಮತ್ತು B ಪಟ್ಟಿಯಲ್ಲಿ ಅವುಗಳ ಕರೆನ್ಸಿಯನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – A | ಪಟ್ಟಿ – B |
|---|---|
| a. ಯು.ಕೆ. | i. ಯಾನ್ |
| b. ಜರ್ಮನಿ | ii. ಯನ್ |
| c. ಜಪಾನ್ | iii. ಪೌಂಡ್ |
| d. ಚೀನಾ | iv. ಡಾಲರ್ |
| | v. ಮಾರ್ಕ್ |

(1) a – i, b – ii, c – iv, d – iii
(2) a – iv, b – ii, c – iii, d – i
(3) a – iii, b – v, c – ii, d – i
(4) a – iv, b – v, c – ii, d – i

126. ಭಾರತೀಯ ವಾಯುದಳಕ್ಕಾಗಿ ದೇಶೀಯ ಯುದ್ಧ ವಿಮಾನಗಳ ತಯಾರಿಕೆಗೆ ಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ತನ್ನನ್ನು ಸಮರ್ಪಿಸಿಕೊಂಡ ಕಾರ್ಖಾನೆ

(1) ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿಸ್
(2) ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್
(3) ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(4) ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್

127. 'ಬ್ಯಾಂಕಿಂಗ್ ಉದ್ಯಮದ ತೊಟ್ಟಿಲುಗಳು' ಎಂದು ಕರೆಯಲಾಗುವ ಜಿಲ್ಲೆಗಳು

(1) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ
(2) ದಕ್ಷಿಣ ಕನ್ನಡ ಮತ್ತು ಉಡುಪಿ
(3) ಉಡುಪಿ ಮತ್ತು ಉತ್ತರ ಕನ್ನಡ
(4) ಉಡುಪಿ ಮತ್ತು ಚಿಕ್ಕಮಗಳೂರು



Visit CollegeDekho

128. ಎಮಿಲಿ ಡರ್ಖಿಮ್‌ರವರು ಈ ದೇಶದ ಪ್ರಸಿದ್ಧ ಸಮಾಜಶಾಸ್ತ್ರಜ್ಞರು

(1) ಫ್ರಾನ್ಸ್ (2) ಜರ್ಮನಿ (3) ಭಾರತ (4) ಇಂಗ್ಲೆಂಡ್

129. ಕೆಳಗಿನ ಗುಣಲಕ್ಷಣಗಳನ್ನು ಓದಿರಿ.

A. ಈ ಸಮಾಜವು ಬಹಳ ಚಿಕ್ಕದಾದ ಹಾಗೂ ಅಲ್ಲಲ್ಲಿ ಚದುರಿದ ಮಾನವ ಸಮೂಹಗಳನ್ನು ಒಳಗೊಂಡಿದೆ.

B. ಈ ಸಮಾಜದಲ್ಲಿ ಸಂಪತ್ತನ್ನು ಸಂಗ್ರಹಿಸುವ ಬಲವಾದ ಇಚ್ಛೆ ಕಾಣಿಸದು.

C. ಇಡೀ ಸಮಾಜವೇ ಇಲ್ಲಿ ಬಂಧುತ್ವದ ಸಂಬಂಧಗಳ ಆಧಾರದ ಮೇಲೆ ಹೆಣೆದುಕೊಂಡಿದೆ.

D. ಇಲ್ಲಿ ರಾಜಕೀಯ ಸಂಸ್ಥೆಗಳಿಲ್ಲ.

ಮೇಲಿನ ಗುಣಲಕ್ಷಣಗಳು ಸಂಬಂಧಿಸಿರುವ ಸಮಾಜ

(1) ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ ಸಮಾಜ

(2) ಪಶುಪಾಲನಾ ಸಮಾಜ

(3) ಕೃಷಿಕ ಸಮಾಜ

(4) ಕೈಗಾರಿಕಾ ಸಮಾಜ

130. ಜಾರ್ವಾ, ಓಂಗೇ, ಸೆಂತಿನೇಲಿ ಬುಡಕಟ್ಟು ಗುಂಪುಗಳು ಕಂಡುಬರುವುದು

(1) ಲಕ್ಷದ್ವೀಪ (2) ಜಮ್ಮು ಮತ್ತು ಕಾಶ್ಮೀರ

(3) ಲಡಾಖ್ (4) ಅಂಡಮಾನ್ ಮತ್ತು ನಿಕೋಬಾರ್

131. ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿರುವ ಸಂವಿಧಾನದ ವಿಧಿ

(1) 14ನೇ ವಿಧಿ (2) 15ನೇ ವಿಧಿ

(3) 16ನೇ ವಿಧಿ (4) 17ನೇ ವಿಧಿ

132. ಪಟ್ಟಿ – Aಯೊಂದಿಗೆ ಪಟ್ಟಿ – Bಯನ್ನು ಹೊಂದಿಸಿ, ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| **ಪಟ್ಟಿ – A** | **ಪಟ್ಟಿ – B** |
|---|---|
| A. ಚಿಪ್ಕೋ ಚಳವಳಿ | i. ಸಲ್ಯಾನಿ ಗ್ರಾಮ |
| B. ಅಪ್ಪಿಕೋ ಚಳವಳಿ | ii. ಉತ್ತರ ಕನ್ನಡ |
| C. ಮೌನ ಕಣಿವೆ ಆಂದೋಲನ | iii. ತೆಹ್ರಿ–ಘರ್ವಾಲ್ |
| D. ಕೈಗಾ ವಿರೋಧಿ ಚಳವಳಿ | iv. ಕೇರಳ |

(1) A – iii B – i C – ii D – iv

(2) A – iii B – iv C – i D – ii

(3) A – iii B – i C – iv D – ii

(4) A – iii B – ii C – i D – iv

A – iii
B – i
C – iv
D – ii



Visit CollegeDekho

133. ಪ್ರತಿವರ್ಷ ವಿಶ್ವ ಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸುವುದು

(1) ಜೂನ್ 01
(2) ಮೇ 22
(3) ಮಾರ್ಚ್ 15
(4) ಜನವರಿ 5

134. ಮಾರುಕಟ್ಟೆ ಮಿಶ್ರಣದ ಪರಿಕಲ್ಪನೆಯನ್ನು ಮೊಟ್ಟ ಮೊದಲಿಗೆ ಪರಿಚಯ ಮಾಡಿಕೊಟ್ಟವರು

(1) ಪ್ರೊ. ಎನ್. ಹೆಚ್. ಬೋರ್ಡನ್
(2) ಆ್ಯಡಂ ಸ್ಮಿತ್
(3) ಜೆ. ಎಲ್. ಹೇನ್ಸ್
(4) ಹೆನ್ರಿ ಫಯೋಲ್

135. ಭಾರತದಲ್ಲಿ ಮೊಟ್ಟ ಮೊದಲು ಷೇರು ಮಾರುಕಟ್ಟೆ ಆರಂಭವಾದ ಸ್ಥಳ

(1) ಮುಂಬೈ
(2) ಕೋಲ್ಕತ್ತಾ
(3) ಮದ್ರಾಸ್
(4) ದೆಹಲಿ

136. ಅಂತಾರಾಷ್ಟ್ರೀಯ ಅರಿವನ್ನು ಮಕ್ಕಳಲ್ಲಿ ಮೂಡಿಸುವುದರಿಂದ ಬೆಳೆಯುವ ಮೌಲ್ಯ

(1) ನಾಯಕತ್ವ
(2) ವಿಶ್ವಭ್ರಾತೃತ್ವ
(3) ಸಹಕಾರ
(4) ಸಹೋದರತ್ವ

137. ಇದು 'ಆಲಿಸುವ' ಮತ್ತು 'ವೀಕ್ಷಿಸುವ' ಅನುಭವಗಳ ನಡುವೆ ಸಂಬಂಧವನ್ನು ಬೆಸೆಯುತ್ತದೆ

(1) ಕಪ್ಪುಹಲಗೆ
(2) ಧ್ವನಿ ಮುದ್ರಿಕೆ
(3) ರೇಡಿಯೋ
(4) ಸೀಮೆ ಸುಣ್ಣ

138. ಪಾತ್ರಗಳನ್ನು ಅಭಿನಯಿಸುವುದರ ಮೂಲಕ ಸಮಸ್ಯೆಗೆ ಪರಿಹಾರವನ್ನು ನೀಡುವ ತಂತ್ರ

(1) ಸಾಮರ್ಥ್ಯಾಧಾರಿತ ಬೋಧನೆ
(2) ಅಣುಬೋಧನೆ
(3) ಅನುಕರಣಾ ಬೋಧನೆ
(4) ಪರಿಹಾರ ಬೋಧನೆ

139. "ಪಾಠ ಯೋಜನೆಯು ನಿರ್ದಿಷ್ಟ ಹಾಗೂ ಸಾಮಾನ್ಯ ಉದ್ದೇಶಗಳನ್ನೊಳಗೊಂಡ ಸುಸಂಘಟಿತವಾದ ಹೇಳಿಕೆಯಾಗಿದೆ. ಈ ಉದ್ದೇಶಗಳನ್ನು ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದ ಅಡಿಯಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಸಾಧಿಸುತ್ತಾರೆ." ಎಂದು ಹೇಳಿದವರು

(1) ಲೆಸ್ಟರ್ ಬಿ. ಸ್ಯಾಂಡ್ಸ್
(2) ಬಾಸಿಂಗ್ ಎನ್. ಎಲ್.
(3) ಸಿ. ವಿ. ಗುಡ್
(4) ಸ್ಯಾಮ್ ಫೋರ್ಡ್



Visit CollegeDekho

140. ಬೋಧನಾ ವಿನ್ಯಾಸದ ಸರಿಯಾದ ಹಂತಗಳು

(1) ಅಭಿವೃದ್ಧಿ, ವಿಶ್ಲೇಷಣೆ, ವಿನ್ಯಾಸ, ಅನುಷ್ಠಾನ, ಮೌಲ್ಯಮಾಪನ

(2) ವಿನ್ಯಾಸ, ವಿಶ್ಲೇಷಣೆ, ಅಭಿವೃದ್ಧಿ, ಅನುಷ್ಠಾನ, ಮೌಲ್ಯಮಾಪನ

(3) ವಿಶ್ಲೇಷಣೆ, ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ, ಮೌಲ್ಯಮಾಪನ

(4) ವಿಶ್ಲೇಷಣೆ, ವಿನ್ಯಾಸ, ಅನುಷ್ಠಾನ, ಅಭಿವೃದ್ಧಿ, ಮೌಲ್ಯಮಾಪನ

141. ಗುರಿ ಮತ್ತು ಉದ್ದೇಶಗಳ ನಡುವಿನ ಕೊಂಡಿಯಾಗಿರುವುದು

(1) ಬೋಧನಾ ವಿಧಾನ

(2) ಪಠ್ಯಕ್ರಮ

(3) ಶಿಕ್ಷಕ

(4) ವಿದ್ಯಾರ್ಥಿ

142. ಸಮಾಜದ ಬೇಡಿಕೆಗಳು ಮತ್ತು ಶಿಕ್ಷಣದ ಗುರಿಗಳನ್ನು ಸಾಧಿಸಲು ಸ್ಪರ್ಧಾತ್ಮಕ ಸಾಂಪ್ರದಾಯಿಕ ತರಗತಿಗಳಿಗಿರುವ ಪರ್ಯಾಯ

(1) ಒಳನೋಟ ಕಲಿಕೆ

(2) ಸ್ವ ಕಲಿಕೆ

(3) ಅನುಭವಾತ್ಮಕ ಕಲಿಕೆ

(4) ಸಹಕಾರ ಕಲಿಕೆ

143. ಅನುಗಮನ ಮತ್ತು ನಿಗಮನ ಪದ್ಧತಿಯನ್ನು ಉಪಯೋಗ ಮಾಡುವ ಮೂಲಾಂಶವನ್ನು ಈ ಕೌಶಲದಲ್ಲಿ ಬಳಸಲಾಗುತ್ತದೆ

(1) ಪ್ರಶ್ನಾ ಕೌಶಲ

(2) ಪೀಠಿಕಾ ಕೌಶಲ

(3) ಉದಾಹರಣೆಗಳೊಂದಿಗೆ ದೃಷ್ಟಾಂತೀಕರಿಸುವ ಕೌಶಲ

(4) ಪ್ರಚೋದನಾ ಬದಲಾವಣೆ ಕೌಶಲ

144. ಇದು ಒಂದು ತರಬೇತಿ ತಂತ್ರವೇ ಹೊರತು ಬೋಧನಾ ತಂತ್ರವಲ್ಲ

(1) ಅಣು ಬೋಧನೆ

(2) ರೂಢಿ ಬೋಧನೆ

(3) ಗುಂಪು ಬೋಧನೆ

(4) ಪರಿಹಾರ ಬೋಧನೆ

145. ವಿದ್ಯಾರ್ಥಿಯು ತುಘಲಕ್‌ನು ರಾಜಧಾನಿ ಬದಲಾವಣೆ ಮಾಡಲು ಕಾರಣಗಳನ್ನು ಕೊಡುವುದು ಈ ಉದ್ದೇಶದ ಅಡಿಯಲ್ಲಿ ಬರುತ್ತದೆ

(1) ಜ್ಞಾನ

(2) ತಿಳುವಳಿಕೆ

(3) ವಿಮರ್ಶಾತ್ಮಕ ಚಿಂತನೆ

(4) ಕೌಶಲ



Visit CollegeDekho

146. ಆಡಳಿತದ ಸಂಘಟನೆ ಮತ್ತು ಕಾರ್ಯಗಳ ಸಂಬಂಧವನ್ನು ತೋರಿಸುವ ಪಟ

(1) ಕೋಷ್ಟಕದ ಪಟ
(2) ಕಾಲಾನುಕ್ರಮ ಪಟ
(3) ಹರಿವು ಪಟ
(4) ವಿಷಯ ಪಟ

147. ಒಂದು ಪ್ರದೇಶದ ಭೌಗೋಳಿಕ ಲಕ್ಷಣಗಳನ್ನು ತೋರಿಸುವಂತಹ ಭೂಪಟದ ವಿಧ

(1) ಚಿತ್ರಾತ್ಮಕ ಭೂಪಟ
(2) ಐತಿಹಾಸಿಕ ಭೂಪಟ
(3) ಸಮತಲ ಭೂಪಟ
(4) ತಗ್ಗುದಿನ್ನೆ ಭೂಪಟ

148. ಇವುಗಳನ್ನು ಸಾಹಿತ್ಯಿಕ ಮೂಲಾಧಾರಗಳೆಂದು ಗುರುತಿಸಲಾಗಿದೆ

(1) ಧಾರ್ಮಿಕ, ಜಾತ್ಯತೀತ, ವಿದೇಶಿ
(2) ಸ್ಮಾರಕಗಳು, ಶಾಸನಗಳು, ನಾಣ್ಯಗಳು
(3) ಮೌಖಿಕ, ಬರವಣಿಗೆ, ಚಿತ್ರ
(4) ದೇವಸ್ಥಾನ, ಮಸೀದಿ, ಚರ್ಚ್

149. ಶಾಲಾ ತರಗತಿಯಲ್ಲಿ ಕಂಡುಬರುವ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರಿಯಾದ ಸಂಶೋಧನೆ

(1) ಮೂಲಭೂತ ಸಂಶೋಧನೆ
(2) ಅನ್ವಯಿಕ ಸಂಶೋಧನೆ
(3) ಕ್ರಿಯಾ ಸಂಶೋಧನೆ
(4) ತುಲನಾತ್ಮಕ ಸಂಶೋಧನೆ

150. ಪ್ರಬಂಧ ಮಾದರಿ ಪ್ರಶ್ನೆಯ ಒಂದು ಮಿತಿ

(1) ಈ ರೀತಿಯ ಪರೀಕ್ಷಾ ಪ್ರಶ್ನೆಗಳನ್ನು ರಚಿಸುವುದು ಸುಲಭ
(2) ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಜಾಸ್ತಿ ಬೇಕು
(3) ವಿದ್ಯಾರ್ಥಿಗಳು ಸ್ವತಂತ್ರವಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಕಲ್ಪಿಸಿದೆ
(4) ವಿದ್ಯಾರ್ಥಿಗಳು ಕಾಪಿ ಮಾಡುವ ಸಾಧ್ಯತೆ ತುಂಬಾ ಕಡಿಮೆ



Visit CollegeDekho